# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 424 |
| 2 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 18-07-2024 |
| 4 | ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ಕೆರೆಗಳಿವೆ ಮತ್ತು ಅವುಗಳ ವಿಸ್ತೀರ್ಣ ಎಷ್ಟು ಕೆರೆಗಳ ಸಂರಕ್ಷಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಶದಲ್ಲಿ 184 ಜೀವಂತ ಕೆರೆಗಳಿದ್ದು ಇವುಗಳ ಒಟ್ಟು ವಿಸ್ತೀರ್ಣ ಸುಮಾರು 5976 ಎಕರೆಗಳಿರುತ್ತವೆ.<br><br>ಈ ಪೈಕಿ ಇದುವರೆವಿಗೂ 136 ಕೆರೆಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತದೆ. ಎಲ್ಲಾ ಹಸ್ತಾಂತರಿಸಲಾಗಿರುವ ಕೆರೆಗಳ ಗಡಿ ಬಾಂದುಗಳಿಗೆ ತಂತಿ ಬೇಲಿಯನ್ನು ಅಳವಡಿಸಿ ಒತ್ತುವರಿಯಾಗದಂತೆ ಸಂರಕ್ಷಿಸಲಾಗುತ್ತಿದೆ. |
| ಆ) | ಕೆರೆ ಒತ್ತುವರಿ ತಡೆಗೆ ಕೈಗೊಂಡಿರುವ ಕ್ರಮಗಳೇನು: ಒತ್ತುವರಿ ಮಾಡಿರುವವರ ವಿರುದ್ಧ ಕ್ರಮ ಜರುಗಿಸಲಾಗಿದೆಯೇ; ಒತ್ತುವರಿ ಮಾಡಿದ ಜಾಗವನ್ನು ಮರಳಿ ಪಡೆಯಲಾಗಿದೆಯೇ; ಎಷ್ಟು ಜನರ ಮೇಲೆ ಕ್ರಮ ಜರುಗಿಸಲಾಗಿದೆ: (ವಿಧಾನಸಭಾ ಕ್ಷೇತ್ರವಾರು ಒತ್ತುವರಿದಾರರ ವಿವರ ನೀಡಿ): | ಕೆರೆಗಳ ಸಂರಕ್ಷಣೆಗಾಗಿ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 38401/2014ರ ದಿನಾಂಕ:1-08-2023 ಮತ್ತು 04-09-2023 ರ ನಿರ್ದೇಶನದ ಪ್ರಕಾರ ಹಾಗೂ ಸರ್ಕಾರದ ಆದೇಶ ಸಂಖ್ಯೆ: ನಅಇ 250 ಎಂಎನ್‌ವೈ 2018 (ಭಾಗ-3) ದಿನಾಂಕ: 28-08-2023 ರಂತೆ ಕೆರೆಗಳ ಒತ್ತುವರಿಗಳನ್ನು ತೆರವುಗೊಳಿಸಲು 16 ವಾರಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿರುತ್ತದೆ.<br><br>ಅದರಂತೆ ಇದುವರೆವಿಗೂ 16 ವಾರಗಳ ಕ್ರಿಯಾ ಯೋಜನೆಯಲ್ಲಿರುವ ಕೆರೆಗಳ ಪಟ್ಟಿಯನ್ನು ತಯಾರಿಸಿ, ಸಂಬಂಧಪಟ್ಟ ತಹಶೀಲ್ದಾರ್‌ಗಳಿಗೆ ಪತ್ರ ಮುಖೇನ ಒತ್ತುವರಿಗಳ ಮೋಜಣಿ ಕಾರ್ಯ ಕೈಗೊಂಡು ನಂತರ ಒತ್ತುವರಿ ತೆರವುಗೊಳಿಸಲು ಕೆರೆಗಳ ವ್ಯಾಪ್ತಿಯ ತಹಶೀಲ್ದಾರ್‌ರವರುಗಳಿಗೆ ಕೋರಲಾಗಿರುತ್ತದೆ.<br><br>ಮುಂದುವರೆದು ಒಟ್ಟಾರೆಯಾಗಿ ಇದುವರೆವಿಗೂ 112 ಕೆರೆಗಳ ಸರ್ವೆ ಕಾರ್ಯ ಪೂರ್ಣಗೊಳಿಸಿರುತ್ತಾರೆ. ಉಳಿದ ಕೆರೆಗಳ ಸರ್ವೆ ಕಾರ್ಯವು ಪ್ರಗತಿಯಲ್ಲಿದ್ದು ಒತ್ತುವರಿಯ ಸರ್ವೆ ನಕ್ಷೆಗಳನ್ನು ಗುರುತಿಸಿ ಕೊಟ್ಟ ನಂತರ ಒತ್ತುವರಿಯನ್ನು ತೆರವುಗೊಳಿಸಲು ಕ್ರಮವಹಿಸಲಾಗುವುದು. |

. . . 2 .

| | | |
|---|---|---|
| ಇ) | ಪ್ರಸ್ತುತ ಕೆರೆಗಳ ಅಡಿಟ್ ಮಾಡಲಾಗಿದೆಯೇ: ಹಿಂದಿನ ಅಡಿಟ್ ಯಾವಾಗ ಮಾಡಲಾಗಿದೆ: (ವರದಿಯ ಪ್ರತಿ ನೀಡುವುದು) | ಹೌದು.<br>2022–23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ದಿನಾಂಕ: 27–06–2023 ರಲ್ಲಿ ಮಾಡಲಾಗಿದೆ. ಆಡಿಟ್ ವರದಿ ಪ್ರತಿಯನ್ನು **ಅನುಬಂಧ–1** ರಲ್ಲಿ ನೀಡಿದೆ. |
| ಈ) | ಒತ್ತುವರಿ ಸಂಪೂರ್ಣ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? | ಮೇಲಿನ ಕಂಡಿಕೆ 'ಆ'ಗೆ ಒದಗಿಸಲಾದ ಉತ್ತರವೇ ಅನ್ವಯಿಸುತ್ತದೆ. |

**ನಅಇ 341 ಎಂಎಸ್‌ವೈ 2024**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

ಅನುಬಂಧ-1

ಕರ್ನಾಟಕ ಸರ್ಕಾರ

ಸಂಖ್ಯೆ: ಮುಲೆಪ/ಕಾಮಗಾರಿ/ 81 /2023-24

ಮುಖ್ಯ ಲೆಕ್ಕ ಪರಿಶೋಧಕರಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
2 ಮತ್ತು 3ನೇ ಮಹಡಿ, ಬಿಬಿಎಂಪಿ
ವಾಣಿಜ್ಯ ಸಂಕೀರ್ಣ, ಸುಭಾಷ್‌ನಗರ (ಮೆಜೆಸ್ಟಿಕ್)
(ಉಪ್ಪಾರಪೇಟೆ ಪೋಲೀಸ್‌ಠಾಣೆ ಹಿಂಭಾಗ),
ಬೆಂಗಳೂರು - 09. ದೂ.ಸಂ. 22340464,
22975578, 22340465. ದಿನಾಂಕ:27-06-2023

ಗೆ,

ಮುಖ್ಯ ಅಭಿಯಂತರರು,
ಕೆರೆಗಳ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೇ,

ವಿಷಯ : ತಮ್ಮ ಕಛೇರಿಯ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಕಳುಹಿಸುವ ಬಗ್ಗೆ.

*******

ತಮ್ಮ ಕಛೇರಿಯ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.

ಈ ಬಗ್ಗೆ ಕೂಡಲೇ ಸೂಕ್ತ ಕ್ರಮಕೈಗೊಂಡು ಆಕ್ಷೇಪಣೆಗಳಿಗೆ ಉತ್ತರವನ್ನು 30 ದಿವಸಗಳ ಒಳಗಾಗಿ, ಈ ಕೆಳಕಂಡ ನಮೂನೆಯಲ್ಲಿ ನಿಯಂತ್ರಣಾಧಿಕಾರಿಗಳ ಷರಾದೊಂದಿಗೆ ಕಳುಹಿಸಿಕೊಡಲು ಕೋರಿದೆ. ತಪ್ಪಿದಲ್ಲಿಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳನ್ನು ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ಸೇರಿಸಲಾಗುವುದು.

| ಕ್ರ ಸಂ | ಕಂಡಿಕೆ ಸಂಖ್ಯೆ | ವರದಿಯ ಆಕ್ಷೇಪಣೆಗಳ ಸಂಕ್ಷೇಪ್ತ ವಿವರ | ವರದಿಯ ವಸೂಲಾತಿಯ ಸಂಕ್ಷೇಪ್ತ ವಿವರ | ವರದಿಯ ಕಂಡಿಕೆವಾರು ಅನುಸರಣೀಯ ವಿವರ | ನಿಯಂತ್ರಣಾಧಿಕಾರಿಗಳ ಅಭಿಪ್ರಾಯ (Controlling Officers remarks) |
|---|---|---|---|---|---|
| 1 | 2 | 3 | 4 | 5 | 6 |

ಸ್ಥಳೀಯ ಲೆಕ್ಕ ಪರಿಶೋಧನಾ ವರದಿಯು ತಲುಪಿದ್ದಕ್ಕೆ ಸ್ವೀಕೃತಿಯನ್ನು ಕಳುಹಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಮುಖ್ಯ ಲೆಕ್ಕಪರಿಶೋಧಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮುಖ್ಯ ಅಭಿಯಂತರರ ಕಛೇರಿ (ಕೆರೆಗಳು) ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಂಖ್ಯೆ 555/23-24
ದಿನಾಂಕ : 30/10/2023

ಪ್ರತಿಯನ್ನು,

1. ಜಂಟಿ ಆಯುಕ್ತರು, (ಆಡಳಿತ) ಮುಖ್ಯ ಕಚೇರಿ ಆವರಣ, ಎನ್.ಆರ್ ಸ್ಕ್ವೇರ್, ಬೆಂಗಳೂರು
2. ಕಛೇರಿ ಪ್ರತಿ.

30/10

CW

# ಮುಖ್ಯ ಅಭಿಯಂತರರು ,

# ಕೆರೆಗಳ ಘಟಕ ,

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

# ಈ ಕಛೇರಿಯ 2022-23ನೇ ಸಾಲಿನ ಲೆಕ್ಕಪರಿಶೋಧನಾ ವರದಿ.

ಮುಖ್ಯ ಅಭಿಯಂತರರು, ಕೆರೆಗಳ ಘಟಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಈ ಕಛೇರಿಯ 2022-23 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ವಿವರ.

| ಕ್ರ. ಸಂ | ಕಂಡಿಕೆ ಸಂಖ್ಯೆ | ನ್ಯೂನತೆಗಳ ವಿವರಗಳು | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|
| | | ಭಾಗ-1 | | |
| 1 | 3.3 | ಹಿಂದಿನ ಸಾಲಿನ ಲೆಕ್ಕ ಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ಸಲ್ಲಿಸುವ ಬಗ್ಗೆ. | - | - |
| | | ಭಾಗ-2 11(ಎ) | | |
| 2 | 1 | ಅನುಮೋದಿತ ಲೀಡ್ ಚಾರ್ಟ್ ಇಲ್ಲದೇ ಡಂಪಿಂಗ್ ಯಾರ್ಡ್ ಗುರುತಿಸದೇ ಲೀಡ್ ಮೊತ್ತವನ್ನು ಪಾವತಿಸಿರುವುದು. | 8,17,326-00 | |
| 3 | 2 | ಸಕ್ಷಮ ಅಧಿಕಾರಿಯಿಂದ ಅನುಮೋದನೆ ಪಡೆದ ಡಾಟಾ ದರಪಟ್ಟಿ ಹಾಜರುಪಡಿಸದಿರುವುದು. | 10,94,423-00 | |
| | | ಭಾಗ-2 11(ಬಿ) | | |
| 4 | 1 | ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಸಿಮೆಂಟ್ ಕಾಂಕ್ರೀಟ್ ಪಾದಚಾರಿ ಮಾರ್ಗ ನಿರ್ಮಾಣಕ್ಕೆ pavement ಕಾಂಕ್ರೀಟ್ ಉಪಯೋಗಿಸದೆ ಕಟ್ಟಡಕ್ಕೆ ಬಳಸುವ ಸಿಮೆಂಟ್ ಕಾಂಕ್ರೀಟ್ ನ್ನು ಉಪಯೋಗಿಸುತ್ತಿರುವುದು. | | 1,32,446-00 |
| 5 | 2 | ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಮಣ್ಣು ಅಗೆಯುವ ವಿಶಿಷ್ಟ ಅಂಶವನ್ನು ಬಳಸದೆ, ಬಿಲ್ಡಿಂಗ್‌ಗೆ ಅಗೆಯುವ ದರಗಳನ್ನು ಅಳವಡಿಸಿ ಹೆಚ್ಚುವರಿಯಾಗಿ ಪಾವತಿಸಿರುವುದು. | | 69,909-00 |
| 6 | 3 | ಎಸ್.ಟಿ.ಪಿ (Sewage Treatment Plant) ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯವು ಬಿ.ಬಿ.ಎಂ.ಪಿಯ ಕಾರ್ಯವ್ಯಾಪ್ತಿಯಲ್ಲಿಲ್ಲದಿದ್ದರು ಸದರಿ ಕಾರ್ಯಗಳಿಗೆ ವೆಚ್ಚ ಮಾಡಿರುವುದು. | 4,60,77,414-00 | |
| | | ಭಾಗ - 2 11(ಸಿ) | | |
| 7 | 1 | ಬ್ಯಾಂಕ್ ಬಡ್ಡಿ ಮೊತ್ತವನ್ನು ಕೇಂದ್ರ ಕಛೇರಿಯ ಆಯುಕ್ತರವರ ಸ್ವೀಕೃತಿ ಖಾತೆಗೆ ವರ್ಗಾಯಿಸದಿರುವುದು. | 41,840-00 | - |
| 8 | 2 | ಕಾರ್ಮಿಕ ಕಲ್ಯಾಣ ಶುಲ್ಕದ ಮೇಲಿನ ಶೇ 1 ರಷ್ಟು ಆಡಳಿತಾತ್ಮಕ ವೆಚ್ಚವನ್ನು ಆಯುಕ್ತರ ಖಾತೆಗೆ ಜಮೆ ಮಾಡದಿರುವುದು. | 1,11,377-00 | - |
| 9 | 3 | ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಡಿಮೆ ಕಟಾಯಿಸಿರುವುದು. | - | 3,37,293-00 |
| 10 | 4 | ಮುಖ್ಯ ಲೆಕ್ಕಾಧಿಕಾರಿ ಕಚೇರಿಯಿಂದ ಆರ್.ಟಿ.ಜಿ.ಎಸ್ ಮೂಲಕ ಬಿಡುಗಡೆ ಮಾಡಲಾದ ಮೊತ್ತ ಖಾತೆಗೆ ಜಮೆಯಾಗದಿರುವುದು. | 14,21,004-00 | - |
| | | ಭಾಗ - 2 11(ಡಿ) | | |
| 11 | 1 | ನಗದು ಪುಸ್ತಕ ಪರಿಶೀಲನೆ ಮತ್ತು ಸಂಸ್ಥೆಯ ಆರ್ಥಿಕ ಸ್ಥಿತಿಯ ಕುರಿತು. | - | - |
| 12 | 2 | ಲೆಕ್ಕಸಮನ್ವಯದ ವಿವರ ಹಾಜರುಪಡಿಸದಿರುವುದು: | - | - |
| 13 | 3 | ಟೆಂಡರ್ ಸಲ್ಲಿಸಲು ನಿಗದಿಪಡಿಸಲಾದ ಕನಿಷ್ಠ ಕಾಲಾವಧಿಯನ್ನು ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಾಮಗಾರಿಗಳಿಗೆ ಪಾಲಿಸಬೇಕಿರುವುದು. | - | - |
| 14 | 4 | ಅಗತ್ಯಕ್ಕೆ ಅನುಗುಣವಾಗಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸದಿರುವುದು. | - | - |
| 15 | 5 | ನಿಯಮಾನುಸಾರ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸದೆ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿರುವುದು. | - | - |
| 16 | 6 | ಸಿಬ್ಬಂದಿ ವೇತನ ಬಟಾವಡೆ ವಿವರಗಳ ಪರಿಶೀಲನೆಯ ನ್ಯೂನತೆಗಳು. | - | - |
| 17 | 7 | ಶ್ರೇಣಿ ವಹಿ ನಿರ್ವಹಿಸದಿರುವುದು. | - | - |

| | | | | |
|---|---|---|---|---|
| 18 | 8 | ಕಾಮಗಾರಿ ವಹಿಯನ್ನು ನಿರ್ವಹಿಸದಿರುವುದು. | – | – |
| 19 | 9 | ಭದ್ರತಾ ಠೇವಣಿ/ಹೆಚ್ಚುವರಿ ಭದ್ರತಾ ಠೇವಣಿ ಕುರಿತು. | – | – |
| 20 | 10 | ಎಕ್ಸ್‌ಟೆಂಕ್ಷನ್ ಆಫ್ ಟೈಮ್ ಕಾಮಗಾರಿ ನಿರ್ವಹಣೆ ಹಂತದಲ್ಲಿಯೇ ಪಡೆಯದೇ ಇರುವುದು. | – | – |
| 21 | 11 | ಕಾಮಗಾರಿ ಕಡತದಲ್ಲಿ ಕಂಡು ಬಂದ ನ್ಯೂನತೆಗಳು. | – | – |
| | | **ಒಟ್ಟು ಮೊತ್ತ ರೂ.** | **4,95,63,384–00** | **5,39,648–00** |

ಮುಖ್ಯ ಲೆಕ್ಕಪರಿಶೋಧಕರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

**ಮುಖ್ಯ ಅಭಿಯಂತರರು, ಕೆರೆಗಳ ಘಟಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಈ ಕಛೇರಿಯ 2022-23 ನೇ ಸಾಲಿನ ಲೆಕ್ಕಪರಿಶೋಧನಾ ವರದಿ.**

**ಭಾಗ-1**

**1. ಪೀಠಿಕೆ – ಸಂಸ್ಥೆಯ ವಿವರ, ಲೆಕ್ಕಪರಿಶೋಧನಾ ವ್ಯಾಪ್ತಿ ಮತ್ತು ಲೆಕ್ಕಪರಿಶೋಧನೆ ಮಾಡಲು ಇರುವ ಕಾಯ್ದೆ / ನಿಯಮಗಳ ಉಲ್ಲೇಖ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020 ರ ಪ್ರಕರಣ 209(2)(5) ರಂತೆ ಪದತ್ತವಾದ ಅಧಿಕಾರದನ್ವಯ ಮುಖ್ಯ ಅಭಿಯಂತರರು, ಕೆರೆಗಳ ಘಟಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಈ ಕಛೇರಿಯಲ್ಲಿ 2022-23 ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಂಡಿದ್ದು ಪರಿಶಿಷ್ಟ 9 ಭಾಗ 2 ನಿಯಮ 10ರನ್ವಯ ಲೆಕ್ಕಪರಿಶೋಧನೆಗೆ ಅಗತ್ಯವಾದ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಲಾಗಿದೆ. ಲೆಕ್ಕಪರಿಶೋಧನೆಗೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿ ಲೆಕ್ಕ ತಪಾಸಣೆಯಲ್ಲಿ ಕಂಡುಬಂದ ನ್ಯೂನತೆಗಳು, ಆಕ್ಷೇಪಣೆ ಹಾಗೂ ವಸೂಲಾತಿ ವಿವರಗಳನ್ನು ನಿಯಮ 11 (ಎ) (ಬಿ) (ಸಿ) ಮತ್ತು (ಡಿ) ರನ್ವಯ ಕಂಡಿಕೆವಾರು ವರದಿಯಲ್ಲಿ ನೀಡಲಾಗಿದೆ. ವರದಿಯಲ್ಲಿ ಸೂಚಿಸಿರುವ ನ್ಯೂನ್ಯತೆಗಳು, ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಸಂಬಂಧಿಸಿದಂತೆ ನಿಯಮ 13(1) ಮತ್ತು (2) ರಂತೆ ಕ್ರಮ ತೆಗೆದುಕೊಂಡು ಸರ್ಕಾರದ ಆದೇಶ ಸಂಖ್ಯೆ: ಈಆ 32 ಃಹ 92ರ ಕೈಪಿಡಿಯಲ್ಲಿ ಲೆಕ್ಕಪರಿಶೋಧನೆ ಕಂಡಿಕೆಗಳ ಶೀಘ್ರ ವಿಲೇವಾರಿ ನೀಡಿರುವ ಮಾರ್ಗಸೂಚಿಯ ಕಂಡಿಕೆ: 3.2 ರಲ್ಲಿ ಸೂಚಿಸಿರುವಂತೆ ಲೆಕ್ಕಪರಿಶೋಧನಾ ವರದಿ ತಲುಪಿದ 15 ದಿನಗಳೊಳಗೆ ಸಲ್ಲಿಸಲು ಅಥವಾ ಅನುಪಾಲನಾ ಉತ್ತರಗಳಿಗೆ ಮೇಲಾಧಿಕಾರಿಗಳ ಶಿಫಾರಸ್ಸು/ಸ್ಪಷ್ಟೀಕರಣಾ/ಆದೇಶ ಅಗತ್ಯವಿದ್ದಲ್ಲಿ ಮೂರುತಿಂಗಳ ಅವಧಿಯೊಳಗೆ ಕಂಡಿಕೆವಾರು ಉತ್ತರಗಳನ್ನು ಸಿದ್ದಪಡಿಸಿ ಅನುಸರಣಾವರದಿಯನ್ನು ಸಲ್ಲಿಸಲು ಸೂಚಿಸಿದೆ.

**2. ಲೆಕ್ಕಪರಿಶೋಧಕರ ತಂಡದ ವಿವರ:**

| | | | |
|---|---|---|---|
| 1. | ಲೆಕ್ಕಪರಿಶೋಧಕರ ವಿವರ | : | 1. ಶ್ರೀ ಸಂತೋಷ್ ಕುಮಾರ್, ಲೆ.ಅ<br>2. ಶ್ರೀ ಸಂತೋಷ್ ಬಿರಾದರ್, ಲೆ.ಅ<br>3. ಶ್ರೀ ಮಂಜುನಾಥ.ಕೆ.ಎಸ್, ಲೆ.ಪ |
| 2. | ಲೆಕ್ಕಪರಿಶೋಧನೆ ಪ್ರಾರಂಭ ದಿನಾಂಕ | : | 10-06-2023 |
| 3. | ಲೆಕ್ಕಪರಿಶೋಧನೆ ಮುಕ್ತಾಯ ದಿನಾಂಕ | : | 20-06-2023 |
| 4. | ಕರಡು ವರದಿಯನ್ನು ಪುನರ್ ಪರಿಶೀಲಿಸಿದ ಅಧಿಕಾರಿಗಳು | : | ಶ್ರೀ ಅವಿನಾಶ್ ಜೆರಾಲ್ಡ್, ಎಂ.ಎ., ಕೆ.ಎಸ್.ಎ.ಎಸ್<br>ಮುಖ್ಯ ಲೆಕ್ಕಪರಿಶೋಧಕರು,<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,<br>ಬೆಂಗಳೂರು. |
| 5. | ವರದಿಯನ್ನು ಪುನರ್ ಪರಿಶೀಲಿಸಿದ ದಿನಾಂಕ | : | 22-06-2023 |

**2.1. ಕಛೇರಿ ಸಿಬ್ಬಂದಿ ವರ್ಗ:**

| ಕ್ರಸಂ | ಪದನಾಮ | ಹೆಸರು | ಪದಾವಧಿ |
|---|---|---|---|
| 1. | ಮುಖ್ಯ ಅಭಿಯಂತರರು | ಶ್ರೀ ವಿಜಯ್ ಕುಮಾರ್ ಹರಿದಾಸ್ | ದಿ: 01-04-2022 ರಿಂದ 23-05-2022. |
| | | ಶ್ರೀಮತಿ ಆರ್ ಸುಗಣ | ದಿ: 23-05-2022 ರಿಂದ 06-06-2022. |
| | | ಶ್ರೀ ಬಿ.ಟಿ.ಮೋಹನ್ ಕೃಷ್ಣ | ದಿ: 06-06-2022 ರಿಂದ 02-08-2022. |
| | | ಶ್ರೀ ಕೆ.ವಿ ಶಶಿಕುಮಾರ್ (ಅಧಿಕ ಪ್ರಭಾರ) | ದಿ: 02-08-2022 ರಿಂದ 05-12-2022. |
| | | ಶ್ರೀ ವಿಜಯ್ ಕುಮಾರ್ ಹರಿದಾಸ್ (ಅಧಿಕ ಪ್ರಭಾರ) | ದಿ: 05-12-2022 ರಿಂದ 31-03-2023. |

| | | | |
|---|---|---|---|
| 2. | ಅಧೀಕ್ಷಕ ಅಭಿಯಂತರರು | ಶ್ರೀ ವಿಜಯ್ ಕುಮಾರ್ ಎನ್ | ದಿ: 01-04-2022 ರಿಂದ 30-04-2022. |
| | | ಶ್ರೀಮತಿ ಸಿಂಧು ಕೆ.ಜೆ | ದಿ: 06-12-2022 ರಿಂದ 31-03-2023 |
| 3. | ಕಾರ್ಯಪಾಲಕ ಅಭಿಯಂತರರು | ಶ್ರೀ ಕೆ.ವಿ.ರವಿ | ದಿ: 01-04-2022 ರಿಂದ 16-12-2022 |
| | | ಶ್ರೀ ಎಲ್. ವೆಂಕಟೇಶ್ (ಅಧಿಕ ಪ್ರಭಾರ) | ದಿ: 01-04-2022 ರಿಂದ 31-03-2023 |
| | | ಶ್ರೀಮತಿ ಗೀತಾ.ಎಲ್ | ದಿ: 01-04-2022 ರಿಂದ 31-03-2023 |
| | | ಶ್ರೀ.ಹೆಚ್.ಬಿ.ಕಲ್ಲೇಶಪ್ಪ | ದಿ: 01-04-2022 ರಿಂದ 19-04-2022 |
| | | ಶ್ರೀಮತಿ ಹೆಚ್.ಎಸ್ ದೀಪ ಶ್ರೀ | ದಿ: 01-04-2022 ರಿಂದ 31-03-2023 |
| | | ಶ್ರೀ ಚೇತನ್ ಎಸ್.ಎನ್ ನಾಯಕ್ | ದಿ: 01-04-2022 ರಿಂದ 01-07-2022 |
| | | ಶ್ರೀ ಎಂ ಮಹಾದೇವ | ದಿ: 01-04-2022 ರಿಂದ 31-03-2023 |
| | | ಶ್ರೀಮತಿ ನಿತ್ಯ ಜೆ. | ದಿ: 31-10-2022 ರಿಂದ 31-03-2023 |
| | | ಶ್ರೀಮತಿ ಭೊಪ್ರದ | ದಿ: 31-10-2022 ರಿಂದ 31-03-2023 |
| | | ಶ್ರೀಮತಿ ಇಂದ್ರಾಣಿ ಕೆ.ಎಂ | ದಿ: 30-01-2023 ರಿಂದ 31-03-2023 |
| | | ಶ್ರೀಮತಿ ಭರತಿ ಎಸ್. | ದಿ: 15-12-2022 ರಿಂದ 31-03-2023 |
| | | ಶ್ರೀ ಎಂ.ಟಿ ಬಾಲಾಜಿ | ದಿ: 03-03-2023 ರಿಂದ 31-03-2023 |
| 4. | ಸಹಾಯಕ ಕಾರ್ಯಪಾಲಕ ಅಭಿಯಂತರರು | ಶ್ರೀಮತಿ ನಿತ್ಯ . ಜೆ | ದಿ: 01-04-2022 ರಿಂದ 31-10-2022 |
| | | ಶ್ರೀಮತಿ ಭೊಪ್ರದ | ದಿ: 01-04-2022 ರಿಂದ 31-03-2023 |
| | | ಶ್ರೀ ಶಿವಲಿಂಗಪ್ಪ ಸಾವುಕಾರ್ | ದಿ: 01-04-2022 ರಿಂದ 31-03-2023 |
| | | ಶ್ರೀ ದೀಪ ನೀಲಾಪ್ಪ ನಿಟ್ಟಾಲಿ | ದಿ: 01-04-2022 ರಿಂದ 11-10-2022 |
| | | ಶ್ರೀ ಅಮೃತ ಸಾಯಿ | ದಿ: 01-04-2022 ರಿಂದ 31-10-2022. |
| | | ಶ್ರೀ ಹೆಚ್.ಕೆ ಸೋಮಶೇಖರಪ್ಪ | ದಿ: 01-04-2022 ರಿಂದ 31-03-2023. |
| | | ಶ್ರೀ ದಯಾನಂದ ಬಿ.ಆರ್ | ದಿ: 01-04-2022 ರಿಂದ 31-05-2022. |
| | | ಶ್ರೀ ಅಕ್ಷತ್ ಎಂ.ಎಂ | ದಿ: 01-04-2022 ರಿಂದ 31-03-2023 |
| | | ಶ್ರೀ ಬಸವರಾಜ | ದಿ: 01-04-2022 ರಿಂದ 17-09-2022 |
| | | ಶ್ರೀ ಶ್ರೀಧರ್ ಪಿ ಕೊಟ್ರೆ | ದಿ: 09-05-2022 ರಿಂದ 31-03-2023 |
| | | ಶ್ರೀಮತಿ ಹೆಚ್ ಎಸ್ ಪ್ರಿಯದರ್ಶಿನಿ | ದಿ: 28-04-2022 ರಿಂದ 31-10-2022 |
| | | ಶ್ರೀ ಟಿ.ಎಂ ನಾರಾಯಣಸ್ವಾಮಿ | ದಿ: 01-04-2022 ರಿಂದ 23-01-2023 |
| | | ಶ್ರೀ ಮಹೇಶ್ ಹುಜರತ್ತಿ | ದಿ: 15-12-2022 ರಿಂದ 31-03-2023 |
| | | ಶ್ರೀಮತಿ ಸ್ವಪ್ನ ಎನ್.ಕೆ | ದಿ: 23-03-2023 ರಿಂದ 31-03-2023 |
| 5. | ಸಹಾಯಕ ಅಭಿಯಂತರರು | ಶ್ರೀಮತಿ ಸ್ವಪ್ನ ಎನ್.ಕೆ | ದಿ: 01-04-2022 ರಿಂದ 23-02-2023. |
| | | ಶ್ರೀಮತಿ ಶಿಲ್ಪ.ಕೆ | ದಿ: 01-04-2022 ರಿಂದ 31-03-2023 |
| | | ಶ್ರೀ ಗಿರೀಶ್ ಕಮಾರ್ ಗುಡ್ಡ | ದಿ: 01-04-2022 ರಿಂದ 31-03-2023 |
| | | ಶ್ರೀ ಸಿ.ವಿ. ಲಕ್ಷ್ಮಣಪ್ಪ | ದಿ: 01-04-2022 ರಿಂದ 26-07-2022. |
| | | ಶ್ರೀ ಪ್ರದೀಪ್ ಎಂ.ಸಿ | ದಿ: 01-04-2022 ರಿಂದ 23-05-2022 |
| | | ಶ್ರೀಮತಿ ಉಷಾರಾಣಿ .ಕೆ (ಅಧಿಕ ಪ್ರಭಾರ) | ದಿ: 02-07-2022 ರಿಂದ 31-03-2023 |
| | | ಶ್ರೀ ಬಿ.ಎನ್ ರಾಘವೇಂದ್ರ | ದಿ: 01-04-2022 ರಿಂದ 31-03-2023 |
| 6. | ಲೆಕ್ಕ ಅಧೀಕ್ಷಕರು | ಶ್ರೀ ದಯಾನಂದ್ ಕೆ.ಎಸ್ | ದಿ: 01-04-2022 ರಿಂದ 31-03-2023 |
| 7. | ವ್ಯವಸ್ಥಾಪಕರು | ಶ್ರೀ ಆರ್ ನಾರಾಯಣ್ | ದಿ: 01-04-2022 ರಿಂದ 31-03-2023 |

| | | | |
|---|---|---|---|
| 8. | ಪ್ರಥಮ ದರ್ಜೆ ಸಹಾಯಕರು | ಶ್ರೀ ಮೊಹಮ್ಮದ್ ಜುಫಿಷನ್ | ದಿ: 01-04-2022 ರಿಂದ 31-03-2023 |
| 9. | ದ್ವಿತಿಯ ದರ್ಜೆ ಸಹಾಯಕರು | ಶ್ರೀ ವೆಂಕಟಪ್ಪ | ದಿ: 01-04-2022 ರಿಂದ 31-03-2023 |
| | | ಶ್ರೀ ಕೆ ರಾಘವೇಂದ್ರ (ಓಓಡಿ ಚುನಾವಣೆ ವಿಭಾಗ ) | ದಿ: 01-04-2022 ರಿಂದ 31-03-2023 |

**3.1 ಸದರಿ ಕಚೇರಿಯ ಕಾರ್ಯ ಚಟುವಟಿಕೆಗಳ ವಿವರ :**

ಪಾಲಿಕೆಯ ವಶದಲ್ಲಿ 205 ಕೆರೆಗಳಿದ್ದು, ಇವುಗಳ ಪೈಕಿ 186 ಜೀವಂತ ಕೆರೆಗಳಾಗಿದ್ದು, ಉಳಿದಂತೆ 19 ಕೆರೆಗಳು ಇತರೆ ಉಪಯೋಗಕ್ಕಾಗಿ ಬಳಕೆಯಾಗುತ್ತಿವೆ. ಕಛೇರಿಯಿಂದ ಕೆರೆಗಳ ಅಭಿವೃದ್ಧಿಗಾಗಿ, ಕೆರೆಗಳ ಮೋಜಣಿ ಮಾಡಿಸಿ ಗಡಿಬಾಂದುಗಳನ್ನು ಗುರ್ತಿಸುವುದು, ಒತ್ತುವರಿಗಳನ್ನು ತೆರವುಗೊಳಿಸುವುದು, ತಂತಿಬೇಲಿಯನ್ನು ನಿರ್ಮಿಸುವುದು, ಕೊಳಚೆ ನೀರಿಗೆ ತಿರುವು ಗಾಲುವೆ ನಿರ್ಮಿಸುವುದು, ವೆಟ್‌ಲ್ಯಾಂಡ್‌ಗಳನ್ನು ನಿರ್ಮಿಸುವುದು, ಕೊಳಚೆ ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವುದು, ಕೆರೆಗೆ ತ್ಯಾಜ್ಯ ಸೇರದಂತೆ ತಡೆದು ವಿಲೇವಾರಿ ಮಾಡುವುದು, ಸ್ಲಷ್ ಮತ್ತು ಸಿಲ್ಟ್ ತೆರವುಗೊಳಿಸುವುದು, ನಡಿಗೆ ಪಥ ನಿರ್ಮಿಸುವುದು, ಅರಣ್ಯೀಕರಣ ಹಾಗೂ ದೇಶೀಯ ಗಿಡ ಮರಗಳನ್ನು ನೆಡುವುದು ಹಾಗೂ ಇತರೆ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ.

**3.2. ಲೆಕ್ಕಪರಿಶೋಧನಾ ವ್ಯಾಪ್ತಿ:**

ಪ್ರಸ್ತುತ ಲೆಕ್ಕಪರಿಶೋಧನೆಯಲ್ಲಿ ಈ ಕೆಳಕಂಡ ವಿವರಗಳನ್ನು ಮತ್ತು ದಾಖಲೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

1. 2022-23ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಮತ್ತು ವೆಚ್ಚಗಳ ವಿವರ.
2. 2022-23ನೇ ಸಾಲಿನಲ್ಲಿ ಇ-ಸಂಗ್ರಹಣೆ ಮೂಲಕ ಕೈಗೊಂಡಿರುವ ಕಾಮಗಾರಿ ಟೆಂಡರ್ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಮಂಜೂರಾತಿ ಆದೇಶಗಳು ಮತ್ತು ಈ ಸಂಬಂಧ ನಿರ್ವಹಿಸಲಾದ ಕಡತಗಳು.
3. 2022-23ನೇ ಸಾಲಿನಲ್ಲಿ ನಿರ್ವಹಿಸಲಾದ ಕಾಮಗಾರಿ ನಗದು ಪುಸ್ತಕ, ಓಚರ್‌ಗಳು, ಅಳತೆ ಪುಸ್ತಕಗಳು, ಭದ್ರತಾ ಠೇವಣಿ ವಹಿ, ಬ್ಯಾಂಕ್ ಪಾಸ್‌ಶೀಟ್.
4. ಸದರಿ ಸಾಲಿನ ವೇತನ ಬಟವಾಡೆ ವಹಿ, ಸೇವಾಪುಸ್ತಕಗಳು, ಸಾದಿಲ್ವಾರು ಬಿಲ್ಲುಗಳ ವಹಿ ಮತ್ತು ಕಡತಗಳು.

**ಈ ಕೆಳಕಂಡ ಕಾಯ್ದೆಗಳಡಿ ಲೆಕ್ಕಪರಿಶೋಧನೆ ಕೈಗೊಳ್ಳಲಾಗಿದೆ.**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020
2. ಕರ್ನಾಟಕ ಸರ್ಕಾರದ ಆಯವ್ಯಯ ಕೈಪಿಡಿ
3. ಕರ್ನಾಟಕ ಖಜಾನೆ ಸಂಹಿತೆ
4. ಸರುಕು ಮತ್ತು ಸೇವಾ ಕಾಯ್ದೆ-2017
5. ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ-2014 ಮತ್ತು ಲೆಕ್ಕ ಸಂಹಿತೆ.
6. ಕರ್ನಾಟಕ ಆರ್ಥಿಕ ಸಂಹಿತೆ-1958
7. ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ-1957
8. ಸಾದಿಲ್ವಾರು ವೆಚ್ಚ ಕೈಪಿಡಿ-1958
9. ಆದಾಯ ತೆರಿಗೆ ಕಾಯ್ದ 1961
10. ಉಪ ಖನಿಜಗಳ ನಿಯಮಗಳು 1994
11. ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸಗಾರ (ಕಲ್ಯಾಣ ಉಪಕರ) ಕಾಯ್ದೆ 1996
12. ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ನಿಧಿ ಅಧಿನಿಯಮ
13. ರಾಜ್ಯ ಲೆಕ್ಕಪರಿಶೋಧನೆ & ಲೆಕ್ಕಪತ್ರ ಇಲಾಖಾ ಲೆಕ್ಕಪರಿಶೋಧನಾ ಕೈಪಿಡಿ ಮಾನದಂಡಗಳು
14. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 1999, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು 2000 ಹಾಗೂ ಆರ್ಥಿಕ ಇಲಾಖೆಯಿಂದ ಕಾಲ ಕಾಲಕ್ಕೆ ಹೊರಡಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ಸ್ಪಷ್ಟನೆಗಳು.

15. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಾಲ ಕಾಲಕ್ಕೆ ಹೊರಡಿಸಲಾದ ಆದೇಶಗಳು, ಸುತ್ತೋಲೆಗಳು ಮತ್ತು ಸ್ಪಷ್ಟನೆಗಳು.

**3.3. ಹಿಂದಿನ ಸಾಲಿನ ವರದಿಯ ಕಂಡಿಕೆಗಳಿಗೆ ತೆಗೆದುಕೊಂಡಿರುವ ಕ್ರಮ ಮತ್ತು ಬಾಕಿ ವಿವರಗಳು:**

ವರದಿಯಲ್ಲಿ ಸೂಚಿಸಿರುವ ನ್ಯೂನ್ಯತೆಗಳು, ಆಕ್ಷೇಪಣೆಗಳು ಮತ್ತು ವಸೂಲಾತಿಗಳಿಗೆ ಸಂಬಂದಿಸಿದಂತೆ ನಿಯಮ 13(1) ಮತ್ತು (2) ರಂತೆ ಕ್ರಮ ಕೈಗೊಂಡು ಸರ್ಕಾರದ ಆದೇಶ ಸಂಖ್ಯೆ: ಈಆ 32 ಣಙ 92ರ ಕೈಪಿಡಿಯಲ್ಲಿ ಲೆಕ್ಕಪರಿಶೋಧನೆ ಕಂಡಿಕೆಗಳ ಶೀಘ್ರ ವಿಲೇವಾರಿಗಾಗಿ ನೀಡಿರುವ ಮಾರ್ಗಸೂಚಿಯಲ್ಲಿ ಸೂಚಿಸಿರುವಂತೆ ಲೆಕ್ಕಪರಿಶೋಧನಾ ವರದಿ ತಲುಪಿಸಿದ 15 ದಿನದೊಳಗೆ ಅಥವಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020 ರಂತೆ ವರದಿಯು ತಲುಪಿದ 30 ದಿನಗಳೊಳಗಾಗಿ ಸಂಬಂಧಿಸಿದ ಸಕ್ಷಮ ಅಧಿಕಾರಿಗಳು ವರದಿಯಲ್ಲಿ ಸೂಚಿಸಿರುವ ಆಕ್ಷೇಪಣೆ/ವಸೂಲಾತಿಗೆ ಸಂಬಂಧಿಸಿದ ನ್ಯೂನತೆಗಳ ಬಗ್ಗೆ ಒಂದು "ಆಡಿಟ್ ಮಿನಿಟ್" ಪುಸ್ತಕವನ್ನು ತೆರೆದು ಕಂಡಿಕೆವಾರು ಅನುಸರಣಾ ವರದಿಗಳನ್ನು ನಮೂದಿಸಿ, ಮುಖ್ಯ ಲೆಕ್ಕ ಪರಿಶೋಧಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರಿಗೆ ಸಲ್ಲಿಸಬೇಕಾಗುತ್ತದೆ. ಆದರೆ ಈ ಕಚೇರಿಯಲ್ಲಿ ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಿರುವ ಬಗ್ಗೆ ಮಾಹಿಯನ್ನು ಒದಗಿಸಿರುವುದಿಲ್ಲ. ಸದರಿ ಕೈಪಿಡಿಯ ಕಂಡಿಕೆ 3.3 ರಂತೆ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೂಚಿಸಿರುವ ನ್ಯೂನ್ಯತೆ, ಆಕ್ಷೇಪಣೆ ಮತ್ತು ವಸೂಲಾತಿಗಳಿಗೆ ಸಂಬಂಧಿಸಿದಂತೆ ಸಕಾಲದಲ್ಲಿ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ, ಅಂತಹ ಪ್ರಕರಣಗಳು ಮರುಕಳಿಸಬಹುದಾದ್ದರಿಂದ ಲೆಕ್ಕಪರಿಶೋಧನೆಯ ಮೂಲ ಉದ್ದೇಶವೇ ನಿರರ್ಥಕವಾಗುತ್ತದೆ ಹಾಗೂ ಇದರಿಂದಾಗಿ ಯಾವುದೇ ಅವ್ಯವಹಾರ, ದುರುಪಯೋಗ ಹಾಗೂ ಕರ್ತವ್ಯ ನಿರ್ಲಕ್ಷ್ಯತೆಯಿಂದ ಪಾಲಿಕೆಗೆ ಉಂಟಾಗುವ ನಷ್ಟವು ಗಮನಕ್ಕೆ ಬಾರದಿರುವ ಸಾದ್ಯತೆ ಇರುತ್ತದೆ ಮತ್ತು ವಸೂಲಾತಿ ಮೊತ್ತವು ತೀರುವಳಿಯಾಗದೆ ಪಾಲಿಕೆಗೆ ಆರ್ಥಿಕ ನಷ್ಟವುಂಟಾಗುವ ಸಂಭವವಿರುತ್ತದೆ. ಅಲ್ಲದೇ ಕಾಲಕಳೆದಂತೆ ಸಂಬಂಧಪಟ್ಟ ನೌಕರರ ನಿವೃತ್ತಿ, ಮರಣ, ಸೇವೆಯಿಂದ ವಜಾ ಹಾಗೂ ಇನ್ನಿತರ ಕಾರಣಗಳಿಂದ ವಸೂಲಾಗಬೇಕಾದ ಮೊತ್ತ ವಸೂಲಾಗದೇ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುವ ಸಂಭವವಿರುತ್ತದೆ ಹಾಗೂ ತೆರಿಗೆ ವಸೂಲಾತಿ ಪ್ರಕರಣಗಳಲ್ಲಿ ಕಾಲಾವಧಿ ಮೀರಿದಲ್ಲಿ, ತೆರಿಗೆ ಮೊತ್ತವನ್ನು ಮರು ಲೆಕ್ಕಾಚಾರ ಮಾಡುವ, ತಪ್ಪನ್ನು ಸರಿಪಡಿಸುವ ಮತ್ತು ಮೇಲ್ಮನವಿ ಸಲ್ಲಿಸುವಅವಕಾಶದಿಂದ ವಂಚಿತರಾಗಬೇಕಾಗುತ್ತದೆ. ಇನ್ನೂ ಕೆಲವು ಪ್ರಕರಣಗಳಲ್ಲಿ ಹಿಂದಿನ ಆದೇಶಗಳಲ್ಲಿನ ಸೋರಿಕೆ ಹಾಗೂ ಲೋಪದೋಷಗಳನ್ನು ಸರಿಪಡಿಸಲು ಶೀಘ್ರವಾಗಿ ಅಂತಹ ಆದೇಶಗಳಿಗೆ ಸೂಕ್ತ ತಿದ್ದುಪಡಿ ಮಾಡಬೇಕಾದ ಅವಶ್ಯಕತೆ ಇರುತ್ತದೆ. ಆದ್ದರಿಂದ ಕಚೇರಿ ಮುಖ್ಯಸ್ಥರು, ಈ ಬಗ್ಗೆ ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ದಿನಾಂಕ: 31-03-2022 ರ ಅಂತ್ಯಕ್ಕೆ ಬಾಕಿ ಉಳಿದಿರುವ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ ಸಂ. | ಲೆಕ್ಕ ತನಿಖಾ ವರದಿಯ ಸಾಲು | ವರದಿಯಂತೆ | | ತೀರುವಳಿ ವಿವರ | | ಅಂತಿಮ ಶಿಲ್ಕು | | ತೀರುವಳಿ ನೀಡಿದ ಆದೇಶ ಸಂಖ್ಯೆ |
|---|---|---|---|---|---|---|---|---|
| | | ಆಕ್ಷೇಪಣಾ ಮೊತ್ತ | ವಸೂಲಾತಿ ಮೊತ್ತ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ | |
| 1. | 2009-10 | 77,24,014.00 | 9,866.00 | 0 | 0 | 77,24,014.00 | 9,866.00 | |
| 2. | 2010-11 | 8,08,36,763.00 | 2,25,50,306.00 | 0 | 0 | 8,08,36,763.00 | 2,25,50,306.00 | |
| 3. | 2011-12 | 4,58,12,628.00 | 13,000.00 | 0 | 0 | 4,58,12,628.00 | 13,000.00 | |
| 4. | 2012-13 | 4,91,83,410.00 | 1,67,686.00 | 0 | 0 | 4,91,83,410.00 | 1,67,686.00 | |
| 5. | 2013-14 | 1,73,57,607.00 | 0 | 0 | 0 | 1,73,57,607.00 | 0 | |
| 6. | 2014-15 | 2,38,20,480.00 | 23,88,194.00 | 0 | 0 | 2,38,20,480.00 | 23,88,194.00 | |
| 7. | 2015-16 | 9,99,517.00 | 3,99,207.00 | 0 | 0 | 9,99,517.00 | 3,99,207.00 | |
| 8. | 2016-17 | 27,54,476.00 | 1,33,593.00 | 0 | 0 | 27,54,476.00 | 1,33,593.00 | |
| 9. | 2017-18 | 1,08,11,284.00 | 5,06,117.00 | 0 | 0 | 1,08,11,284.00 | 5,06,117.00 | |
| 10. | 2018-19 | 0 | 2,61,173.00 | 0 | 0 | 0 | 2,61,173.00 | |
| 11. | 2019-20 | 61,00,933.00 | 4,00,931.00 | 0 | 0 | 61,00,933.00 | 4,00,931.00 | |
| 12. | 2020-21 | 23,93,967.00 | 2,24,041.00 | 0 | 0 | 23,93,967.00 | 2,24,041.00 | |
| 13. | 2021-22 | 2,46,01,053.00 | 5,49,038.00 | 0 | 0 | 2,46,01,053.00 | 5,49,038.00 | |
| | ಒಟ್ಟು ರೂ | **27,23,96,132.00** | **2,76,03,152.00** | **0** | **0** | **27,23,96,132.00** | **2,76,03,152.00** | |

4. ಕಛೇರಿ ಆರ್ಥಿಕ ಪರಿಸ್ಥಿತಿ :

ಮುಖ್ಯ ಅಭಿಯಂತರರು, ಕೆರೆಗಳ ಘಟಕ ಕಛೇರಿಯ ಫ್ಲೆಕ್ಸಿ ಖಾತೆಯ ಆರ್ಥಿಕ ವಹಿವಾಟನ್ನು ಸಿಂಡಿಕೇಟ್ ಬ್ಯಾಂಕ್ನ BWSSB Branch ಖಾತೆ ಸಂಖ್ಯೆ: 04462010091708 ರಲ್ಲಿ ನಿರ್ವಹಿಸಲಾಗಿದೆ. 2022-23 ನೇ ಸಾಲಿಗೆ ಸಂಬಂಧಿಸಿದಂತೆ ಸದರಿ ಖಾತೆಯ ಸ್ವೀಕೃತಿ ಮತ್ತು ಪಾವತಿ ವಿವರಗಳು ಕೆಳಕಂಡಂತಿವೆ. (ಬ್ಯಾಂಕ್ ಪಾಸ್‌ಶೀಟ್‌ನಂತೆ)

| ಕ್ರ ಸಂ | ವಿವರ | ಮೊತ್ತ |
|---|---|---|
| 01 | 1-4-2022ಕ್ಕೆ ಆರಂಭಿಕ ಶಿಲ್ಕು | 1,78,992.00 |
| 02 | 2022-23ನೇ ಸಾಲಿನ ಸ್ವೀಕೃತಿ | 23,91,07,980.00 |
| | **ಒಟ್ಟು ಮೊತ್ತ** | **23,92,86,972.00** |
| 03 | 2022-23ನೇ ಸಾಲಿನ ಪಾವತಿ | 23,77,71,497.00 |
| 04 | 31-3-2023 ಕ್ಕೆ ಅಂತಿಮ ಶಿಲ್ಕು | **15,15,475.00** |

ಕಛೇರಿಯ ಕಾಮಗಾರಿ ಬಿಲ್ಲುಗಳ ಪಾವತಿಯನ್ನು ಕೇಂದ್ರೀಕೃತ ಪಾವತಿ ವ್ಯವಸ್ಥೆಯಲ್ಲಿ ಕೇಂದ್ರ ಕಛೇಯಿಂದಲೇ ಮಾಡಲಾಗಿರುತ್ತದೆ.ಕಾಮಗಾರಿ ಬಿಲ್‌ಗಳಲ್ಲಿ ಕಟಾಯಿಸ ಬೇಕಾದ ಶಾಸನಾತ್ಮಕ ಕಟಾವಣೆಗಳನ್ನು/ಇಎಂಡಿ/ ಎಫ್‌ಎಸ್‌ಡಿಗಳನ್ನು ಮಾತ್ರ ನಿಯಮಿತವಾಗಿ ಈ ಕಛೇರಿಯ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗಿರುತ್ತದೆ.ಈ ರೀತಿ ವರ್ಗಾಯಿಸಲಾದ ಮೊತ್ತಗಳನ್ನು ಸಂಬಂಧಿಸಿದ ಇಲಾಖೆಗಳಿಗೆ/ ಗುತ್ತಿಗೆದಾರರಿಗೆ ಚೆಕ್/ ಆರ್‌ಟಿಜಿಎಸ್ ಮೂಲಕ ಪಾವತಿ ಮಾಡಲಾಗಿರುತ್ತದೆ.ಆದ್ದರಿಂದ ಈ ರೀತಿಯ ಮೊತ್ತಗಳನ್ನು ಸಂಸ್ಥೆಗೆ ಬಂದ ಆದಾಯವೆಂದು ಪರಿಗಣಿಸಲು ಕಷ್ಟಸಾಧ್ಯವಾಗಿರುತ್ತದೆ. ಅಲ್ಲದೇ ಸದರಿ ಕಛೇರಿಗಳ ಬ್ಯಾಂಕ್ ಖಾತೆಗಳಲ್ಲಿ ಇರುವಂತಹ ಉಳಿಕೆ ಮೊತ್ತಗಳನ್ನು ನಿಯಮಿತವಾಗಿ ಕೇಂದ್ರ ಕಛೇರಿಯಿಂದ ನೇರವಾಗಿ (Sweep) ವರ್ಗಾಯಿಸಿ ಕೊಳ್ಳಲಾಗಿರುತ್ತದೆ.

ಸದರಿ ಕಛೇರಿಯ ನಗದು ಪುಸ್ತಕದಲ್ಲಿ ಪ್ರತಿ ಮಾಹೆಯ ಅಂತ್ಯದಲ್ಲಿ ನಮೂದಿಸಿರುವಂತೆ ನಗದು ಪುಸ್ತಕದ ಅಂತಿಮ ಶಿಲ್ಕಿಗೂ ಮತ್ತು ಬ್ಯಾಂಕ್‌ನಲ್ಲಿರುವ ಅಂತಿಮ ಶಿಲ್ಕಿಗೂ ವ್ಯತ್ಯಾಸವಿದ್ದು, ಈ ವ್ಯತ್ಯಾಸದ ಮೊತ್ತ ಯಾವ ಯಾವ ವಹಿವಾಟಿಗೆ ಸಂಬಂದಿಸಿರುವುದು ಎಂಬುದನ್ನು ಸವಿವರವಾಗಿ ಲೆಕ್ಕಸಮನ್ವಯಗೊಳಿಸಿರುವುದಿಲ್ಲ. ಆದ್ದರಿಂದ ಸದರಿ ಕಛೇರಿಯಲ್ಲಿ ಈ ಆರ್ಥಿಕ ಸಾಲಿನಲ್ಲಿ ಒಟ್ಟು ಎಷ್ಟು ಹಣಕಾಸಿನ ವಹಿವಾಟು ಆಗಿದೆ ಎಂಬುದನ್ನು ನಿಖರವಾಗಿ ಹೇಳಲು ಲೆಕ್ಕತನಿಖೆಗೆ ಸಾಧ್ಯವಿರುವುದಿಲ್ಲ. ಈ ಎಲ್ಲಾ ನ್ಯೂನತೆಗಳ ನಡುವೆ ಕಛೇರಿಯ ನಗದು ಪುಸ್ತಕದ ಅಂತಿಮಶಿಲ್ಕಿನೊಂದಿಗೆ ಬ್ಯಾಂಕ್ ಪಾಸ್‌ಪುಸ್ತಕದ ಅಂತಿಮಶಿಲ್ಕು ತಾಳೆ ಹೊಂದುತ್ತದೆ ಎಂದು ಧೃಡೀಕರಿಸಲು ಸಾಧ್ಯವಿರುವುದಿಲ್ಲ ಎಂಬುದನ್ನು ಲೆಕ್ಕತನಿಖೆಯು ಅಭಿಪ್ರಾಯಿಸಿದೆ.

ಬ್ಯಾಂಕ್ ಪಾಸ್‌ಪುಸ್ತಕದಂತೆ 31-3-2023 ರಲ್ಲಿ ಅಂತಿಮ ಶಿಲ್ಕು ರೂ. 15,15,475-00 ಗಳಾಗಿರುತ್ತದೆ ಮತ್ತು ನಗದು ಪುಸ್ತಕವನ್ನು 31-3-2023 ಕ್ಕೆ ಲೆಕ್ಕಸಮನ್ವಯಗೊಳಿಸಿರುವುದಿಲ್ಲ ಹಾಗೂ ಅಂತಿಮ ಶಿಲ್ಕನ್ನು ದಾಖಲಿಸಿರುವುದಿಲ್ಲ.

5. **ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾದ ಶಾಸನಬದ್ಧ ಕಟಾವಣೆಗಳ ವಿವರ:**

2022-23ನೇ ಸಾಲಿನಲ್ಲಿ ಕಟಾಯಿಸಲಾದ ಶಾಸನಬದ್ಧ ಕಟಾವಣೆಗಳ ಮಾಹೆವಾರು ವಿವರ ಕೆಳಕಂಡಂತಿವೆ.

| **Statutory deductions for the year 2022-23** | | | | | | |
|---|---|---|---|---|---|---|
| **MONTH /ವಿವರಗಳು** | **IT** | **VAT** | **GST** | **ROYALTY** | **LWF** | **CBF** |
| Apr-22 | 5689230 | 0 | 4799950 | 1642215 | 2325690 | 232570 |

| | | | | | | |
|---|---|---|---|---|---|---|
| May-22 | 2042815 | 0 | 2577000 | 638230 | 1310115 | 131037 |
| Jun-22 | 221770 | 0 | 91600 | 106490 | 40155 | 4015 |
| Jul-22 | 6279331 | 13183 | 5917480 | 2223320 | 2921786 | 292185 |
| Aug-22 | 1406700 | 0 | 1228350 | 663547 | 639310 | 63935 |
| Sep-22 | 2195970 | 0 | 1996888 | 1341700 | 983665 | 98370 |
| Oct-22 | 0 | 0 | 0 | 0 | 0 | 0 |
| Nov-22 | 2604730 | 0 | 2608920 | 2371085 | 1309845 | 131000 |
| Dec-22 | 0 | 0 | 0 | 0 | 0 | 0 |
| Jan-23 | 3338065 | 0 | 3025768 | 1927569 | 2046176 | 204713 |
| Feb-23 | 467800 | 0 | 467800 | 821935 | 233900 | 23390 |
| Mar-23 | 345800 | 0 | 345800 | 242078 | 172900 | 17290 |
| **TOTAL** | **24592211** | **13183** | **23059556** | **11978169** | **11983542** | **1198505** |

6. **ವೆಚ್ಚದ ವಿವರಗಳು:-**

2022-23 ನೇ ಸಾಲಿಗೆ ದಿನಾಂಕ: 01-04-2022 ರಿಂದ 31-03-2023 ರವರೆಗೆ ಮುಖ್ಯ ಅಭಿಯಂತರರು, ಕೆರೆಗಳ ಘಟಕ, ಹಣಕಾಸಿನ ವ್ಯವಹಾರವು RRM CODE 611 ರಿಂದ 615 ರ ಸಂಖ್ಯೆಯಡಿ IFMS ಮುಖಾಂತರ CBR ಬಿಲ್ಲಿನಲ್ಲಿ ವೆಚ್ಚವನ್ನು ಭರಿಸಲಾಗಿದೆ. ಸದರಿ ಕಛೇರಿಯಿಂದ ದೃಢೀಕರಿಸಿ ನೀಡಿರುವ ಮಾಹಿತಿಯಂತೆ P Code-wise ವಿವರಗಳು ಈ ಕೆಳಕಂಡಂತಿವೆ.

| Sl No | Budget_Head | Sum of gross | Sum of total_dedu | Sum of nett |
|---|---|---|---|---|
| 1 | P0190 Works sanctioned by Hon Mayor | 6509879 | 253010 | 6256869 |
| 2 | P0979 M and R of Hospitals, Maternity Homes, Dispensary and Doctors Qtrs / Clinical Laboratories | 329573 | 53619 | 275954 |
| 3 | P2175 Improvements To New Lakes | 23518865 | 1281165 | 22237700 |
| 4 | P2741 Improvements of Lakes under GoK Grants | 36200158 | 2168220 | 34031938 |
| 5 | P3028 Maintenance of Lakes current works | 178570143 | 7853513 | 170716630 |
| 6 | P3106 Nagarothana Works | 7672188 | 476222 | 7195966 |
| 7 | P3110 14th Finance Commission Grant Works | 10956781 | 572365 | 10384416 |
| 8 | P3111 State Finance Commission Untied Grant Works | 855500 | 87000 | 768500 |
| 9 | P3181 Developmental Works in Ward no 183, 29, 190, 177, 168, 13, 14, 3, 4, 89, 27, 126 and 132 | 5258235 | 268480 | 4989755 |
| 10 | P3214 Development of Sankey Tank Park in ward No.35 | 7583460 | 584655 | 6998805 |
| 11 | P3326 Improvement of Anjanapura Lake | 29132500 | 1622575 | 27509925 |
| 12 | P3662 Development of balance works at Kempambhudi Lake | 295000 | 29500 | 265500 |

| | | | | |
|---|---|---|---|---|
| 13 | P3664 Improvements and Developemt of Lake in K.R.Puram Assembly Constituency | 575000 | 57500 | 517500 |
| 14 | P3743 CM Nava Nagarothana- Lake Development | 875505262 | 48594315 | 826910947 |
| 15 | P3760 Subra Bengaluru- Lakes Development works | 164121722 | 9764605 | 154357117 |
| | **Grand Total** | **1347084266** | **73666744** | **1273417522** |

2022-23 ನೇ ಸಾಲಿಗೆ ದಿನಾಂಕ: 01-04-2022 ರಿಂದ 31-03-2023 ರವರೆಗೆ ಮುಖ್ಯ ಅಭಿಯಂತರರು, ಕೆರೆಗಳ ಘಟಕ, ಹಣಕಾಸಿನ ವ್ಯವಹಾರವು ಡಿಡಿಓ CODE 611 ಸಂಖ್ಯೆಯಡಿ IFMS ಮುಖಾಂತರ DC ಬಿಲ್ಲಿನಲ್ಲಿ ವೆಚ್ಚವನ್ನು ಭರಿಸಲಾಗಿದೆ. ಸದರಿ ಕಛೇರಿಯಿಂದ ಧೃಢೀಕರಿಸಿ ನೀಡಿರುವ ಮಾಹಿತಿಯಂತೆ P Code-wise ವಿವರಗಳು ಈ ಕೆಳಕಂಡಂತಿವೆ.

| **Bruhat Bengaluru Mahanagara Palike<br>N R square<br>DC Bill PCode-wise (From 01-Apr-2022 to 31-Mar-2023)** | | |
|---|---|---|
| **sl.no** | **Budget_Head** | **Amount** |
| 1 | P3309 Electricity Charges All Depts | 59,62,706.00 |
| | **GRAND TOTAL** | **59,62,706.00** |

7. ವರ್ಗೀಕೃತ ಸ್ವೀಕೃತಿ ಮತ್ತು ಪಾವತಿಯ ವಿವರಣಾ ಪಟ್ಟಿ:-

| ಮುಖ್ಯ ಅಭಿಯಂತರರು, ಕೆರೆಗಳ ಘಟಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು<br>ಈ ಕಛೇರಿಯ 2022-23 ನೇ ಸಾಲಿನ ವರ್ಗೀಕೃತ ಜಮಾ ಮತ್ತು ಖರ್ಚಿನ ತಃಖ್ತೆ | | | | | |
|---|---|---|---|---|---|
| ಕ್ರ ಸಂ | ಜಮಾ ವಿವರ | ಮೊತ್ತ | ಕ್ರ ಸಂ | ಜಮಾ ವಿವರ | ಮೊತ್ತ |
| 2022-23 ನೇ ಸಾಲಿನ ಶಾಸನಬದ್ಧ ಕಟಾವಣೆಗಳ ಸ್ವೀಕೃತಿ ವಿವರಗಳು: | | | 2022-23 ನೇ ಸಾಲಿನ ಶಾಸನಬದ್ಧ ಕಟಾವಣೆಗಳ ಪಾವತಿ ವಿವರಗಳು: | | |
| 1 | ಆದಾಯ ತೆರಿಗೆ | 2,40,74,464.00 | 1 | ಆದಾಯ ತೆರಿಗೆ | 2,30,30,054.00 |
| 2 | ಸರಕು ಮತ್ತು ಸೇವಾ ತೆರಿಗೆ | 2,26,73,796.00 | 2 | ಸರಕು ಮತ್ತು ಸೇವಾ ತೆರಿಗೆ | 2,17,07,168.00 |
| 3 | ಕಾರ್ಮಿಕ ಕಲ್ಯಾಣ ನಿಧಿ | 1,17,98,201.00 | 3 | ಕಾರ್ಮಿಕ ಕಲ್ಯಾಣ ನಿಧಿ | 1,06,42,576.00 |
| 4 | ರಾಜಧನ | 1,17,77,234.00 | 4 | ರಾಜಧನ | 1,10,24,524.00 |
| 5 | ಗುತ್ತಿಗೆದಾರರ ಕಲ್ಯಾಣ ನಿಧಿ | 11,79,960.00 | 5 | ಗುತ್ತಿಗೆ ದಾರರ ಕಲ್ಯಾಣ ನಿಧಿ | 11,19,567.00 |
| 6 | ಭದ್ರತಾ ಠೇವಣಿ ಸ್ವೀಕೃತಿ | 5,97,085.00 | 2021-22 ನೇ ಸಾಲಿನ ಶಾಸನಬದ್ಧ ಕಟಾವಣೆಗಳು ಪ್ರಸಕ್ತ ಸಾಲಿನಲ್ಲಿ ಪಾವತಿಯಾಗಿರುವ ವಿವರಗಳು: | | |
| 2021-22 ನೇ ಸಾಲಿನ ಶಾಸನಬದ್ಧ ಕಟಾವಣೆಗಳ ಸ್ವೀಕೃತಿ ವಿವರಗಳು: | | | 6 | ಆದಾಯ ತೆರಿಗೆ | 37,215.00 |
| 7 | ಆದಾಯ ತೆರಿಗೆ | 28,415.00 | 7 | ಸರಕು ಮತ್ತು ಸೇವಾ ತೆರಿಗೆ | 65,312.00 |
| 8 | ಸರಕು ಮತ್ತು ಸೇವಾ ತೆರಿಗೆ | 56,830.00 | 8 | ಕಾರ್ಮಿಕ ಕಲ್ಯಾಣ ನಿಧಿ | 32,485.00 |
| 9 | ಕಾರ್ಮಿಕ ಕಲ್ಯಾಣ ನಿಧಿ | 28,415.00 | 9 | ಗುತ್ತಿಗೆದಾರರ ಕಲ್ಯಾಣ ನಿಧಿ | 3,285.00 |

| | | | | | |
|---|---|---|---|---|---|
| 10 | ಭದ್ರತಾ ಠೇವಣಿ ಸ್ವೀಕೃತಿ | 36,400.00 | ಇತರೆ ಪಾವತಿ: | | |
| 11 | ಗುತ್ತಿಗೆದಾರರ ಕಲ್ಯಾಣ ನಿಧಿ | 2,845.00 | 10 | ಸ್ವೀಪ್ ಔಟ್ ಪಾವತಿ | 8,91,19,554.00 |
| ಇತರೆ ಪಾವತಿ: | | | 11 | ಭದ್ರತಾ ಠೇವಣಿ/ಇ ಎಂ ಡಿ/ಟೆಂಡರ್ ವ್ಯತ್ಯಾಸದ ಮರುಪಾವತಿ | 7,33,505.00 |
| 7 | ಬ್ಯಾಂಕ್ ಬಡ್ಡಿ | 41,840.00 | 12 | ಬ್ಯಾಂಕ್ ಚಾರ್ಜಸ್ | 1,652.00 |
| 8 | ಸ್ವೀಪಿನ್ ಸ್ವೀಕೃತಿ | 8,58,34,851.00 | 13 | 2022-23ನೇ ಸಾಲಿನ ಹೋಮ್ ಗಾರ್ಡ್ಸ್ ಸಂಬಳ ಪಾವತಿ | 8,00,82,485.00 |
| 9 | INT. ON SWCR | 1,60,099.00 | 14 | 2022-23 ನೇ ಸಾಲಿನಲ್ಲಿ ಹಿಂಪಡೆದ ಹೋಮ್ ಗಾರ್ಡ್ಸ್ ಸಂಬಳ ಮರು ಪಾವತಿಸಿರುವುದು | 80,560.00 |
| 10 | ವ್ಯತ್ಯಾಸದ ಮೊತ್ತ ಪಡೆದಿರುವುದು | 4,86,500.00 | 15 | 2021-22 ನೇ ಸಾಲಿನಲ್ಲಿ ಹಿಂಪಡೆದ ಹೋಮ್ ಗಾರ್ಡ್ಸ್ ಸಂಬಳ ವರದಿ ಸಾಲಿನಲ್ಲಿ ಪಾವತಿಸಿರುವುದು | 13,275.00 |
| 11 | ಹೋಮ್ ಗಾರ್ಡ್ಸ್ ಸಂಬಳ ಪಡೆದಿರುವುದು | 7,98,31,665.00 | 16 | CONTR /ಇತರೆ | 78,280.00 |
| 12 | ಪಾವತಿಸಿರುವ ಹೊಂ ಗಾರ್ಡ ಸಂಬಳ ಹಿಂಪಡೆದಿರುವುದು | 4,21,100.00 | | | |
| 13 | CONTRA/ಇತರೆ | 78,280.00 | | | |
| | ಒಟ್ಟು ಜಮಾ | **23,91,07,980.00** | | ಒಟ್ಟು ಖರ್ಚು | **23,77,71,497.00** |
| | ಪ್ರಾರಂಭ ಶಿಲ್ಕು | 1,78,992.00 | | ಅಂತಿಮ ಶಿಲ್ಕು | 15,15,475.00 |
| | ಅಂತೂ ಒಟ್ಟು | **23,92,86,972.00** | | ಅಂತೂ ಒಟ್ಟು | **23,92,86,972.00** |

**ಭಾಗ-2**

**ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ನಿಯಮ 11(ಎ) ರ ಕಾನೂನಿಗೆ ವಿರುದ್ಧವಾಗಿ ಸಂದಾಯ ಮಾಡಿದ ಪ್ರಕರಣಗಳು:**

1. **ಅನುಮೋದಿತ ಲೀಡ್ ಚಾರ್ಟ್ ಇಲ್ಲದೇ ಡಂಪಿಂಗ್ ಯಾರ್ಡ್ ಗುರುತಿಸದೇ ಲೀಡ್ ಮೊತ್ತವನ್ನು ಪಾವತಿಸಿರುವುದು:**

2022-23 ನೇ ಸಾಲಿನ ಕಾಮಗಾರಿ ಕಡತಗಳನ್ನು ಪರಿಶೀಲಿಸಲಾಗಿ, ಅಂದಾಜಿನಲ್ಲಿ ಅವಕಾಶ ಮಾಡಿಕೊಳ್ಳಲಾದ ಲೀಡ್ ವೆಚ್ಚ ಪಾವತಿಸುವ ಅಂಶಗಳಿಗೆ ಸಂಬಂಧಿಸಿದಂತೆ ಅನುಮೋದಿತ ಲೀಡ್ ಚಾರ್ಟ್ಗಳು ಯಾವುದೇ ಕಡತದಲ್ಲಿ ಕಂಡುಬಂದಿರುವುದಿಲ್ಲ. ಅಲ್ಲದೇ ಅಂದಾಜುಗಳಿಗೆ ಲೀಡ್ ನಕಾಶೆಯನ್ನು ಲಗತ್ತಿಸದೇ 8-15 ಕಿ.ಮೀ.ವರೆಗೆ ಲೀಡ್ ಮೊತ್ತವನ್ನು ಪಾವತಿ ಮಾಡಿರುವುದು ಕಂಡುಬಂದಿರುತ್ತದೆ.

ಕಾಮಗಾರಿ ನಡೆದ ಸ್ಥಳದಲ್ಲಿ ದೊರೆಯುವ ಭಗ್ನಾವಶೇಷಗಳು, ಹೊರತೆಗೆದ ವಸ್ತುಗಳು, ಹೂಳು ಇತರೆ ಅವಶೇಷಗಳನ್ನು ಹೊರಸಾಗಿಸಲು ಕೂಡ ಲೀಡ್ ಮೊತ್ತ ಪಾವತಿಸಲು ಅಂದಾಜು ಪಟ್ಟಿಯಲ್ಲಿ ಅವಕಾಶ ಮಾಡಿಕೊಂಡಿದ್ದು, ಈ ಬಗ್ಗೆಯೂ ಕೂಡ ಡಂಪಿಂಗ್ ಯಾರ್ಡನ್ನು ಗುರುತಿಸದೇ ಇರುವುದು ಮತ್ತು ಕಾಮಗಾರಿ ನಡೆಯುವ ಸ್ಥಳಕ್ಕೆ ಇರುವ ದೂರವನ್ನು ಗುರುತಿಸಿ ಲೀಡ್ ಚಾರ್ಟ್ಗೆ ಅನುಮೋದನೆ ಪಡೆಯದೇ ಬಿಲ್ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಮುಖ್ಯ ಅಭಿಯಂತರರು ತಾಂತ್ರಿಕ ಮಂಜೂರಾತಿ ನೀಡುವ ಸಂದರ್ಭದಲ್ಲಿ ಲೀಡ್ ಮೊತ್ತ ಪಾವತಿಸುವಾಗ ಕಾಮಗಾರಿ ನಡೆಯುವ ಸ್ಥಳಕ್ಕೂ ನಿಗದಿತ ಡಂಪಿಂಗ್ ಯಾರ್ಡ್ಗೂ ಇರುವ ದೂರವನ್ನು ಅಂದಾಜಿಸಿ ಲೀಡ್ಗೆ ಅನುಮೋದನೆ

(ಕೆ.ಪಿ.ಡಬ್ಲೂಯ ಕೋಡ್ ಪ್ಯಾರಾ 119) ಪಡೆಯಲು ಸೂಚಿಸಲಾಗಿದ್ದರೂ ಸಹ ಈ ಬಗ್ಗೆ ತಾಂತ್ರಿಕ ಸಿಬ್ಬಂದಿಗಳಾಗಲೀ ಅಥವಾ ಲೆಕ್ಕಪತ್ರ ವಿಭಾಗದ ಸಿಬ್ಬಂದಿಗಳಾಗಲೀ ಯಾವುದೇ ಕ್ರಮವಹಿಸದೇ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ಸೂಕ್ತ ವಿವರಣೆ ನೀಡುವಂತೆ ವಿಚಾರಣೆ ಪತ್ರಸಂಖ್ಯೆ:09/2023-24 ದಿ20-06-2023ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ವಿವರಣೆ ನೀಡಿರುವುದಿಲ್ಲ. ಅನುಬಂಧ-1 ರಲ್ಲಿ ವಿವರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ಡಂಪಿಂಗ್ ಯಾರ್ಡ್ ಚಾರ್ಟ್ಸ್ ಹಾಜರುಪಡಿಸುವವರೆಗೆ **ರೂ.8,17,326-00** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**2. ಸಕ್ಷಮ ಅಧಿಕಾರಿಯಿಂದ ಅನುಮೋದನೆ ಪಡೆದ ಡಾಟಾ ದರಪಟ್ಟಿ ಹಾಜರುಪಡಿಸದಿರುವುದು.**

2022-23ನೇ ಸಾಲಿನ ಕಾಮಗಾರಿ ಅಂದಾಜುಗಳನ್ನು ಪರಿಶೀಲಿಸಲಾಗಿ, ಲೋಕೋಪಯೋಗಿ ಎಸ್ಆರ್ ದರಪಟ್ಟಿಯಲ್ಲಿ ಇಲ್ಲದಿರುವ ಐಟಂಗಳಿಗೆ ಅನುಮೋದಿತ ಡಾಟಾರೇಟ್ ಆಧಾರದ ಮೇಲೆ ಅಳವಡಿಸಿಕೊಂಡು ಅಂದಾಜುಪಟ್ಟಿ ತಯಾರಿಸಲಾಗಿರುತ್ತದೆ. ಅಂದಾಜುಪಟ್ಟಿಯಲ್ಲಿ ಅಳವಡಿಸಿ ಕೊಂಡಿರುವ ಐಟಂಗಳಿಗೆ ಡಾಟಾ ದರಗಳಿಗೆ ಸಕ್ಷಮ ಅಧಿಕಾರಿಯಿಂದ ಅನುಮೋದನೆ ಪಡೆದಿರುವ ಪ್ರತಿಗಳನ್ನು ಲೆಕ್ಕತನಿಖೆಗೆ ಹಾಜರುಪಡಿಸುವಂತೆ ವಿಚಾರಣೆ ಪತ್ರಸಂಖ್ಯೆ:08/ 2022-23 ದಿ:20-06-2023 ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ವಿವರಣೆ ನೀಡಿರುವುದಿಲ್ಲ. ಅನುಬಂಧ-2 ರಲ್ಲಿ ವಿವರಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲ್ಪಟ್ಟ ದರಪಟ್ಟಿಯನ್ನು ಹಾಜರುಪಡಿಸುವವರೆಗೆ **ರೂ.10,94,423-00** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**ಭಾಗ-2**

**ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ನಿಯಮ 11(ಬಿ)ರನ್ವಯ ಯಾವುದೇ ವ್ಯಕ್ತಿಯ ಅತೀವ ದುರ್ನಡತೆ ಅಥವಾ ನಿರ್ಲಕ್ಷ್ಯದಿಂದಾಗಿ ಆದಂತಹ ನಷ್ಟ ಅಥವಾ ಕೊರತೆಯ ಮೊತ್ತಗಳ ಪ್ರಕರಣಗಳು:**

**1. ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಸಿಮೆಂಟ್ ಕಾಂಕ್ರೀಟ್ ಪಾದಚಾರಿ ಮಾರ್ಗ ನಿರ್ಮಾಣಕ್ಕೆ pavement ಕಾಂಕ್ರೀಟ್ ಉಪಯೋಗಿಸದೆ ಕಟ್ಟಡಕ್ಕೆ ಬಳಸುವ ಸಿಮೆಂಟ್ ಕಾಂಕ್ರೀಟ್ ನ್ನು ಉಪಯೋಗಿಸುತ್ತಿರುವುದು.**

2022-23 ನೇ ಸಾಲಿನ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಹಾಜರುಪಡಿಸಿದ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಲೆಕ್ಕತನಿಖೆಗೆ ಹಾಜರುಪಡಿಸಲಾದ ಅಭಿವೃದ್ಧಿ ಕಾಮಗಾರಿ ಕಡತಗಳ ಅಂದಾಜುಪಟ್ಟಿಗಳನ್ನು ಪರಿಶೀಲಿಸಲಾಗಿ, ಯಲ್ಲಿ ಕೆರೆಯ ಸುತ್ತ ಮುತ್ತಲಿನ ಪ್ರದೇಶ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿಗಾಗಿ ಅಂದಾಜಿಸಲಾದ ಅಂದಾಜುಪಟ್ಟಿಯನ್ನು, 2018-19 ನೇ ಸಾಲಿನ ಎಸ್ಆರ್ ದರಪಟ್ಟಿ ಆಧಾರದ ಮೇಲೆ ತಯಾರಿಸಲಾಗಿರುತ್ತದೆ. ಅದರಂತೆ ರಸ್ತೆ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿಕೊಳ್ಳಲಾದ ಸಿಮೆಂಟ್ ಕಾಂಕ್ರೀಟ್ ರಸ್ತೆ ನಿರ್ಮಾಣ ಹಾಗೂ ಸಿಮೆಂಟ್ ಕಾಂಕ್ರೀಟ್ ಪಾದಚಾರಿ ಮಾರ್ಗ ನಿರ್ಮಾಣಕ್ಕೆ ಲೋಕೋಪಯೋಗಿ ಇಲಾಖೆ ದರ ಪಟ್ಟಿ chapter 4.0, 4.0, 4.48.1 ಹಾಗೂ 4.4.9.1 ಪುಟ ಸಂಖ್ಯೆ 19 ರ ಸ್ಪೆಸಿಫಿಕೇಷನ್ ಪ್ರಕಾರ ದರ ಕ್ಲೇಮು ಮಾಡಲಾಗಿದೆ. ಈ specification valt foundation, column footing, main and secondary beams ಸಂಬಂಧ ಉಪಯೋಗಿಸಬಹುದಾಗಿರುತ್ತದೆ. ದರ ಪಟ್ಟಿಯ chapter 22.0 concrete pavement ನ ಕ್ರಮ ಸಂಖ್ಯೆ 22.6.1, 22-6-2 ರಲ್ಲಿನ specification ಪ್ರಕಾರ ಕಾಂಕ್ರೀಟ್ ಉಪಯೋಗಿಸಬಹುದಿತ್ತು. ಹಾಗೂ ದರ ಪಟ್ಟಿಯಲ್ಲಿ concrete pavement ಗೆ ಪ್ರತ್ಯೇಕವಾಗಿ chapter ಇರುವುದರಿಂದ ಈ chapterನ specification ಉಪಯೋಗಿಸದೆ, ಸಿಮೆಂಟ್ ಕಾಂಕ್ರೀಟ್‌ನ ಆರ್.ಎಂ.ಸಿ ಉಪಯೋಗಿಸಲಾಗುತ್ತಿದೆ. ಇದರಿಂದ ಒಂದು ಕ್ಯೂಬಿಕ್ ಮೀಟರ್ ಕಾಂಕ್ರೀಟ್‌ಗೆ ಸುಮಾರು ರೂ 800-00 ರಿಂದ 1000-00 ಹೆಚ್ಚು ಕ್ಲೇಮು ಮಾಡಿದಂತಾಗುತ್ತದೆ. ಈ ಬಗ್ಗೆ ತಾಂತ್ರಿಕ ಸಮರ್ಥನೆ ನೀಡುವುದು ಅಗತ್ಯವಾಗಿರುತ್ತದೆ. ವಿವರಗಳನ್ನು ಅನುಬಂಧ-03 ರಲ್ಲಿ ನೀಡಲಾಗಿದೆ.

ಈ ಬಗ್ಗೆ ಲೆಕ್ಕ ವಿಚಾರಣೆ ಪತ್ರ ಸಂಖ್ಯೆ:-15/2023-24 ದಿನಾಂಕ 20-06-2023 ರಲ್ಲಿ ಜಾರಿ ಮಾಡಿ ವಿವರಣೆ ಕೋರಲಾಗಿದ್ದರು ಸಹ ಯಾವುದೇ ತಾಂತ್ರಿಕ ವಿವರಣೆಯನ್ನು ನೀಡಿರುವುದಿಲ್ಲ. ಆದ್ದರಿ ಹೆಚ್ಚುವರಿಯಾಗಿ ಪಾವತಿಸಿದ ಮೊತ್ತ **ರೂ.1,32,446-00** ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ಪಾಲಿಕೆ ನಿಧಿಗೆ ಜಮಾ ಮಾಡುವವರೆಗೆ ಸದರಿ ಮೊತ್ತವನ್ನು ವಸೂಲಾತಿಗೆ ಸೂಚಿಸಿದೆ.

**2. ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಮಣ್ಣು ಅಗೆಯುವ ವಿಶಿಷ್ಟ ಅಂಶವನ್ನು ಬಳಸದೆ, ಬಿಲ್ಡಿಂಗ್‌ಗೆ ಅಗೆಯುವ ದರಗಳನ್ನು ಅಳವಡಿಸಿ ಹೆಚ್ಚುವರಿಯಾಗಿ ಪಾವತಿಸಿರುವುದು.**

2022-23 ನೇ ಸಾಲಿನ ಕಾಮಗಾರಿ ಬಿಲ್‌ಗಳನ್ನು ಪರಿಶೀಲಿಸಲಾಗಿ ಕೆಳಕಂಡ ವೋಚರ್‌ಗಳಲ್ಲಿ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಮಣ್ಣು ಅಗೆಯಲು ಎಸ್.ಆರ್.ಐಟಂ.ಸಂಖ್ಯೆ 19.1 ರಲ್ಲಿನ ದರ ಅಳವಡಿಸುವ ಬದಲು ಎಸ್ಕವೇಶನ್ ಫಾರ್ ಸ್ಟಕ್ಚರ್‌ಗೆ ನಿಗದಿಪಡಿಸಿರುವ 19.22 ರ ದರಗಳನ್ನು ಅಳವಡಿಸಲು ಮತ್ತು ಅಗೆದಂತ ಮಣ್ಣನ್ನು ಅಲ್ಲೇ ಬಳಸಿಕೊಳ್ಳಲು ವಿಶಿಷ್ಟಾಂಶದಲ್ಲಿ ನಮೂಸಿದ್ದರೂ ಸಹ ಸದರಿ ಮಣ್ಣನ್ನು ಹೊರಸಾಗಿಸಲು ಅವಕಾಶ ಮಾಡಿಕೊಳ್ಳಲಾಗಿದೆ. ಸದರಿ ಮಣ್ಣನ್ನು ಹೊರಸಾಗಿಸಲು ಅವಕಾಶ ಮಾಡಿರುವುದರಿಂದ ವಿಶಿಷ್ಟಾಂಶ19.1ರಲ್ಲಿ ದರ ಅಳವಡಿಕೊಳ್ಳಬೇಕಿರುತ್ತದೆ. ಈ ರೀತಿ ಅಳವಡಿಸಿಕೊಳ್ಳದೆ ಎಸ್ಕವೇಶನ್ ಫಾರ್ ಸ್ಟಕ್ಚರ್ ನಿಗದಿತ 19.22ರ ದರವನ್ನು ಅಳವಡಿಸಿಕೊಳ್ಳುವ ಮೂಲಕ ಹೆಚ್ಚುವರಿಯಾಗಿ ರೂ.69.909-00 ಗಳನ್ನು ಪಾವತಿಸಿದಂತಾಗಿದೆ.

ಈ ಬಗ್ಗೆ ಲೆಕ್ಕವಿಚಾರಣಾ ಪತ್ರ ಸಂಖ್ಯೆ : 17/2022-23 ದಿನಾಂಕ : 20-06-2023 ರಲ್ಲಿ ವಿವರಣೆ ಕೋರಲಾಗಿದ್ದು, ಆದರೆ ಯಾವುದೇ ವಿವರ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಸದರಿ ವ್ಯತ್ಯಾಸದ ಮೊತ್ತ ರೂ 69,909-00 ಗಳನ್ನು ಲೆಕ್ಕ ತನಿಖೆಯು ವಸೂಲಿಗೆ ಪ್ರಸ್ತಾಪಿಸಿದೆ. ವಿವರಗಳನ್ನು ಅನುಬಂಧ-04 ರಲ್ಲಿ ನೀಡಲಾಗಿದೆ.

**3. ಎಸ್.ಟಿ.ಪಿ (Sewage Treatment Plant) ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯವು ಬಿ.ಬಿ.ಎಂ.ಪಿ ಯ ಕಾರ್ಯವ್ಯಾಪ್ತಿಯಲ್ಲಿಲ್ಲದಿದ್ದರು ಸದರಿ ಕಾರ್ಯಗಳಿಗೆ ವೆಚ್ಚ ಮಾಡಿರುವುದು.**

ಮುಖ್ಯ ಅಭಿಯಂತರರು, ಕೆರೆಗಳ ವಿಭಾಗ, ಬಿ.ಬಿ.ಎಂ.ಪಿ ಕಚೇರಿಯ ವತಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಲವು ಎಸ್.ಟಿ.ಪಿಗಳ ನಿರ್ವಹಣೆ ಹಾಗೂ ಹೊಸ ಎಸ್.ಟಿ.ಪಿ ಗಳನ್ನು ಸ್ಥಾಪಿಸಲಾಗುತ್ತಿದ್ದು ಎಸ್.ಟಿ.ಪಿ ಗಳ ನಿರ್ವಹಣೆ ಹಾಗೂ ಹೊಸದಾಗಿ ಎಸ್.ಟಿ.ಪಿ ಅಭಿವೃದ್ಧಿಪಡಿಸುವ ಸಲುವಾಗಿ ಸದರಿ ಸಾಲಿನಲ್ಲಿ ಒಟ್ಟು **ರೂ.4,60,77,414-00** ಗಳನ್ನು ವೆಚ್ಚ ಮಾಡಲಾಗಿದೆ. ವಿವರಗಳನ್ನು ಅನುಬಂಧ-05 ರಲ್ಲಿ ನೀಡಲಾಗಿದೆ.

The Bangalore Water Supply and Sewerage act 1964 , Chapter V ರ ಪ್ರಕಾರ ಬೆಂಗಳೂರು ವ್ಯಾಪ್ತಿಯಲ್ಲಿನ ದ್ರವ ತ್ಯಾಜ್ಯ ನಿರ್ವಹಣೆಯು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯವ್ಯಾಪ್ತಿಯಡಿ ಬರುತ್ತದೆ. ಆದಕಾರಣ ಎಸ್.ಟಿ.ಪಿ ಗೆ ಸಂಬಂಧಿಸಿದ ಕಾರ್ಯಗಳನ್ನು ಬಿ.ಬಿ.ಎಂ.ಪಿ ಕೆರೆ ವಿಭಾಗ ಯಾವ ನಿಯಮದಡಿ ನಿರ್ವಹಿಸಲಾಗುತ್ತಿದೆ ? ಹಾಗೂ ಮುಖ್ಯ ಅಭಿಯಂತರರು, ಕೆರೆಗಳ ವಿಭಾಗ, ಇವರ ಕಚೇರಿಗೆ ಎಸ್.ಟಿ.ಪಿ ಅಭಿವೃದ್ಧಿ ಹಾಗೂ ನಿರ್ವಹಣೆಗೆ ಅಗತ್ಯವಿರುವ ತ್ರಾಂತ್ರಿಕ ಪರಣಿತಿ ಇದೆಯೇ? ಎಸ್.ಟಿ.ಪಿ ಅಭಿವೃದ್ಧಿ ಕಾರ್ಯಕ್ಕಾಗಿ ಹೊರಗುತ್ತಿಗೆ ಸಂಸ್ಥಯ ಮೂಲಕ ಸಮಾಲೋಚನಾ ಸೇವೆ ಪಡೆಯಾಲಾಗಿರುತ್ತದೆ ? ಎಸ್.ಟಿ.ಪಿ ಅಭಿವೃದ್ಧಿ ಸಂಬಂಧಿಸಿಂದಂತೆ ಬೈಲದಲ್ಲಿ ಅಲವಡಿಸಲಾಗಿದೆಯೇ ? ಎಸ್.ಟಿ.ಪಿ ಅಭಿವೃದ್ಧಿ ಕಾರ್ಯಕ್ಕಾಗಿ ಸರ್ಕಾರದಿಂದ ಅದೇಶವಿದ್ದಲ್ಲಿ ಸದರಿ ಪ್ರತಿಯನ್ನು ನೀಡುವಂತೆ ಹಾಗು ಎಸ್.ಟಿ.ಪಿ ಅಭಿವೃದ್ಧಿ ಹಾಗೂ ನಿರ್ವಹಣೆ ಬಗ್ಗೆ ಸಂಸ್ಥೆಯೊಂದಿಗೆ ಸಮಾಲೋಚನೆ ನಡೆಸಲಾಗಿದೆಯೇ ಬಗ್ಗೆ ಮಾಹಿತಿಯನ್ನು ಸಲ್ಲಿಸುವಂತೆ ಸದರಿ ವಿಚಾರಣೆ ಪತ್ರದಲ್ಲಿ ಕೋರಲಾಗಿತ್ತು. ಈ ಬಗ್ಗೆ ಯಾವುದೇ ವಿವರಣೆ ನೀಡಿರುದಿಲ್ಲವಾದ್ದುದರಿಂದ ಪಾವತಿಯಾಗಿರುವ ಮೊತ್ತ **ರೂ.4,60,77,414-00** ಗಳನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ.

**ಭಾಗ-2**

**ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ನಿಯಮ 11(ಸಿ) ರನ್ವಯ ಸ್ವೀಕೃತವಾದ ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವ ಪ್ರಕರಣಗಳು.**

**1. ಬ್ಯಾಂಕ್ ಬಡ್ಡಿ ಮೊತ್ತವನ್ನು ಕೇಂದ್ರ ಕಛೇರಿಯ ಆಯುಕ್ತರವರ ಸ್ವೀಕೃತಿ ಖಾತೆಗೆ ವರ್ಗಾಯಿಸದಿರುವ ಕುರಿತು.**

ಬ್ಯಾಂಕ್ ಖಾತೆ ಸಂಖ್ಯೆ:04462010091708 ಸಿಂಡಿಕೇಟ್ ಬ್ಯಾಂಕ್, ಬಿ.ಡಬ್ಲ್ಯೂ.ಎಸ್.ಎಸ್.ಬಿ ಶಾಖೆ, ಮೈಸೂರು ಬ್ಯಾಂಕ್ ಸರ್ಕಲ್ ಇಲ್ಲಿ chief accounts officer BBMP project-2 bangalore ರವರ ಹೆಸರಿನಲ್ಲಿ joint holder regular savings ಖಾತೆಯನ್ನು ಹೊಂದಿದ್ದು, ಈ ಖಾತೆಗೆ ದಿನಾಂಕ :01-04-2022 ರಿಂದ 31-03-2023 ರ ವರೆಗೆ ರೂ.41,840-00 ಬಡ್ಡಿ ಮೊತ್ತ ಜಮೆ ಆಗಿದ್ದು, ಈ ಮೊತ್ತ ಪಾಲಿಕೆಗೆ ಸ್ವೀಕೃತಿಯಾಗಿರುವುದರಿಂದ ಈ ಮೊತ್ತವನ್ನು ಕೇಂದ್ರ ಕಛೇರಿಯ ಆಯುಕ್ತರವರ ಸ್ವೀಕೃತಿ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ. ಆದರೆ ಜಮೆ ಮಾಡಿರುವುದಿಲ್ಲ. ಈ ಬಗ್ಗೆ ವಿವರ ಒದಗಿಸುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ :14/2023-24 ದಿನಾಂಕ :12-06-2023 ರಲ್ಲಿ ಕೋರಲಾಗಿತ್ತು, ಯಾವುದೇ ವಿವರ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಜಮೆ ಮಾಡಿ ವಿವರಗಳನ್ನು ಒದಗಿಸುವವರೆಗೆ **ರೂ.41,840-00** ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**2. ಕಾರ್ಮಿಕ ಕಲ್ಯಾಣ ಶುಲ್ಕದ ಮೇಲಿನ ಶೇ 1 ರಷ್ಟು ಆಡಳಿತಾತ್ಮಕ ವೆಚ್ಚವನ್ನು ಆಯುಕ್ತರ ಖಾತೆಗೆ ಜಮೆ ಮಾಡದಿರುವುದು:**

2022-23 ನೇ ಸಾಲಿನ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿರುವ ಕಾರ್ಮಿಕ ಕಲ್ಯಾಣ ಶುಲ್ಕ ರೂ.1,11,35,901-00 ಗಳ ಮೇಲೆ ಆಡಳಿತಾತ್ಮಕ ವೆಚ್ಚ ಶೇ 1 ರಷ್ಟು ರೂ.1,11,377-00 ಗಳನ್ನು ಕಟಾಯಿಸಿ/ ಕಡಿತಗೊಳಿಸಿ ಕೇಂದ್ರ ಕಛೇರಿಯಲ್ಲಿನ ಆಯುಕ್ತರವರ ಸ್ವೀಕೃತಿ ಖಾತೆಗೆ ವರ್ಗಾಯಿಸಬೇಕಿರುತ್ತದೆ. ಆಡಳಿತಾತ್ಮಕ ವೆಚ್ಚ ಶೇ 1 ರಷ್ಟು ರೂ.1,11,377-00 ಗಳನ್ನು ವರ್ಗಾಯಿಸಿರುವುದಿಲ್ಲ. ಈ ಬಗ್ಗೆ ವಿವರ ಒದಗಿಸುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ :04/2023-24 ದಿನಾಂಕ:20-06-2023 ರಲ್ಲಿ ಕೋರಲಾಗಿತ್ತು, ಯಾವುದೇ ವಿವರ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಜಮೆ ಮಾಡಿ ವಿವರಗಳನ್ನು ಒದಗಿಸುವವರೆಗೆ ರೂ.1,11,377-00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ರೂ.ಗಳಲ್ಲಿ

| Statutory deductions for the year 2022-23 | | | |
|---|---|---|---|
| MONTH | LWF | | |
| | LWF ಮೊತ್ತ | ಪಾವತಿಸಿರುವುದು (LESS 1%) | ವ್ಯತ್ಯಾಸ |
| Apr-22 | 1689890 | 1672990 | 16900 |
| May-22 | 1936955 | 1917585 | 19370 |
| Jun-22 | 40155 | 39753 | 402 |
| Jul-22 | 2918490 | 2889300 | 29190 |
| Aug-22 | 639310 | 632910 | 6400 |
| Sep-22 | 975040 | 965290 | 9750 |
| Oct-22 | 0 | 0 | 0 |
| Nov-22 | 1259205 | 1246610 | 12595 |
| Dec-22 | 0 | 0 | 0 |

| | | | |
|---|---|---|---|
| Jan-23 | 1676856 | 1660086 | 16770 |
| Feb-23 | 0 | 0 | 0 |
| Mar-23 | 0 | 0 | 0 |
| **TOTAL** | **11135901** | **11024524** | **111377** |

**3. ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಡಿಮೆ ಕಟಾಯಿಸಿರುವುದು.**

2022–23ನೇ ಸಾಲಿನ ಲೆಕ್ಕಪರಿಶೋಧನೆಯ ಅವಧಿಯಲ್ಲಿ ಹಾಜರುಪಡಿಸಿದ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಬಿಲ್ಲುಗಳಲ್ಲಿ ರಾಜಧನವನ್ನು ಕಡಿಮೆ ಕಟಾಯಿಸಿರುವುದು ಕಂಡು ಬಂದಿರುತ್ತದೆ. ಅಲ್ಲದೇ ನಿಗದಿತ ಕ್ವಾರಿಗಳಿಂದ ಪಡೆದ ಎಂಡಿಪಿಳು ಕಡತದಲ್ಲಿ ಕಂಡು ಬಂದಿರುವುದಿಲ್ಲ. ನಿರ್ದೇಶಕರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸುತ್ತೋಲೆ ಸಂಖ್ಯೆ:–ಗಭೂಇ/ಡಿ.ಸಿ.ಬಿ/2021–21ರಲ್ಲಿ ದಿನಾಂಕ:–03–07–2020ರಲ್ಲಿ ಕಟ್ಟಡ ಮತ್ತು ರಸ್ತೆ ಕಾಮಗಾರಿಯಲ್ಲಿ ಉಪಯೋಗಿಸುವ ಉಪ ಖನಿಜಗಳಿಗೆ ಪರಿಷ್ಕೃತ ದರವನ್ನು ನಿಗದಿಪಡಿಸಿ ಗುತ್ತಿಗೆದಾರರ ಕಾಮಗಾರಿ ಬಿಲ್ಲುಗಳಲ್ಲಿ ರಾಜಧನದ ಮೊತ್ತವನ್ನು ಕಟಾಯಿಸಬೇಕಾಗಿರುತ್ತದೆ. ಹಾಗೂ ಬಳಸಲಾದ ಉಪಖನಿಜಗಳ ವಿವರಗಳು ಹಲವು ಕಡತಗಳಲ್ಲಿ ಕಂಡುಬರುವುದಿಲ್ಲ. ಇದರ ಅನುಪಸ್ಥಿತಿಯಲ್ಲಿ ಉಪಖನಿಜಗಳನ್ನು ಎಷ್ಟು ಪ್ರಮಾಣದಲ್ಲಿ ಬಳಸಲಾಗಿದೆ? ಎಂಬುದನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ಸರ್ಕಾರಕ್ಕೆ ಬರಬೇಕಾದ ರಾಜಧನವನ್ನು ಕಡಿಮೆ ಕಟಾಯಿಸಿರುವುದು ಕಂಡುಬಂದಿರುತ್ತದೆ. ಕಡಿಮೆ ಕಟಾಯಿಸಲಾದ ಮೊತ್ತ ರೂ.3,91,904–00 ಗೆ ಸೂಕ್ತ ವಿವರಣೆ ನೀಡುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:07/2023–24 ದಿನಾಂಕರಂದು ಕೋರಲಾಗಿತ್ತು. ಆದರೆ ಯಾವುದೇ ವಿವರ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಮೊತ್ತ ರೂ.3,37,293–00 ಗಳನ್ನು ವಸೂಲಿಸಿ ಸಂಬಂಧಿಸಿದ ಇಲಾಖೆಗೆ ಜಮೆ ಮಾಡಲು ಸೂಚಿಸಿದೆ. ಬಿಲ್ಲಿನ ವಿವರಗಳನ್ನು **ಅನುಬಂಧ–6** ರಲ್ಲಿ ನೀಡಲಾಗಿದೆ.

**4. ಮುಖ್ಯ ಲೆಕ್ಕಾಧಿಕಾರಿ ಕಚೇರಿಯಿಂದ ಆರ್.ಟಿ.ಜಿ.ಎಸ್ ಮೂಲಕ ಬಿಡುಗಡೆಮಾಡಲಾದ ಮೊತ್ತ ಖಾತೆಗೆ ಜಮೆಯಾಗದಿರುವ ಬಗ್ಗೆ.**

2022–23 ನೇ ಸಾಲಿನಲ್ಲಿ ಮುಖ್ಯ ಅಭಿಯಂತರರು, ಕೆರೆಗಳ ಘಟಕ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಈ ಕಛೇರಿಯ ಫ್ಲೆಕ್ಸಿ ಖಾತೆಯ ಆರ್ಥಿಕ ವಹಿವಾಟನ್ನು ಸಿಂಡಿಕೇಟ್ ಬ್ಯಾಂಕ್ನ ಃಘಜಿಃ ಃಡಿಚಿಟಿಛಿ ಖಾತೆ ಸಂಖ್ಯೆ: 04462010091708 ರಲ್ಲಿ ನಿರ್ವಹಿಸಲಾಗಿದ್ದು, ಸದರಿ ಆರ್ಥಿಕ ವರ್ಷದಲ್ಲಿ ಡಿಡಿಒ ಸಂಖ್ಯೆ 614 ಕ್ಕೆ ಸಂಬಂದಿಸಿದಂತೆ ಶಾಸನಬದ್ಧ ಕಟಾವಣೆಗಳನ್ನು ಮುಖ್ಯ ಲೆಕ್ಕಾಧಿಕಾರಿಗಳ ಖಾತೆಯಿಂದ ಸಿಂಡಿಕೇಟ್ ಬ್ಯಾಂಕ್ ಖಾತೆಗೆ ಜಮೆಯಾಗಿರುವ ವಿವರಗಳನ್ನು ಪರಿಶೀಲಿಸಲಾಗಿ 2022–23 ನೇ ಸಾಲಿನಲ್ಲಿ ಒಟ್ಟು ರೂ. 14,21,004/–ಗಳ ಮೊತ್ತವು ಜಮೆಯಾಗದಿರುವುದು ಕಂಡುಬಂದಿದೆ. ವಿವರ ಕೆಳಕಂಡಂತಿದೆ ಸದರಿ ಮೊತ್ತವು ಜಮೆಯಾಗಿದಿರುವುದಕ್ಕೆ ಸೂಕ್ತ ವಿವರಣೆಯನ್ನು ನೀಡುವಂತೆ ಲೆಕ್ಕ ವಿಚಾರಣಾ ಪತ್ರ ಸಂಖ್ಯೆ:03/2023–24 ಹಾಗೂ 04/2023–24/13–06–2023 ರಂದು ಕೋರಲಾಗಿತ್ತು. ಆದರೆ ಯಾವುದೇ ವಿವರ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಮೊತ್ತ ರೂ.14,21,004–00 ಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ಸೂಚಿಸಿದೆ. ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

| sl no | Job code | it | Vat | Cgst tds | Sgst tds | fsd | labour cess | royalty | cbf | total dedu |
|---|---|---|---|---|---|---|---|---|---|---|
| 1 | 308-18-000035 | 14955 | 0 | 13355 | 13355 | 74775 | 14955 | 0 | 1500 | 132895 |
| 2 | 035-18-000066 | 71365 | 0 | 31900 | 31900 | 0 | 35685 | 107465 | 3570 | 281885 |
| 3 | 308-20-000009 | 49165 | 0 | 4920 | 4920 | 0 | 0 | 0 | 0 | 59005 |
| 4 | 308-20-000005 | 112860 | 0 | 11300 | 11300 | 0 | 0 | 0 | 0 | 135460 |

| | | | | | | | | | | |
|---|---|---|---|---|---|---|---|---|---|---|
| 5 | 105-19-000024 | 6592 | 13183 | 0 | 0 | 24718 | 3296 | 500 | 330 | 48619 |
| 6 | 308-20-000009 | 262810 | 0 | 131405 | 131405 | 0 | 131405 | 92970 | 13145 | 763140 |
| | | | | | | | | | **Grand Total** | **142100** |

ಭಾಗ-2

**ಕರ್ನಾಟಕ ಪೌರ ನಿಗಮಗಳ ಅಧಿನಿಯಮ 1976 ರ ನಿಯಮ 11(ಡಿ) ರಲ್ಲಿ ಸೂಚಿಸಿರುವಂತೆ ನಿಯಮ 11 (ಎ) (ಬಿ) ಮತ್ತು (ಸಿ) ಗಳಲ್ಲಿ ನಮೂದಿಸಿರುವುದಂತಹುಗಳನ್ನು ಹೊರತುಪಡಿಸಿ ಉಳಿದಂತೆ ಕಂಡುಬಂದ ನ್ಯೂನ್ಯತೆ ಕ್ರಮ ದೋಷ ಮತ್ತು ಅನೈಚಿತ್ಯತೆಯಿಂದ ಕೂಡಿದ ಹಣಕಾಸು ವ್ಯವಹಾರಗಳ ಪ್ರಕರಣಗಳು:**

**1. ನಗದು ಪುಸ್ತಕ ಪರಿಶೀಲನೆ ಮತ್ತು ಸಂಸ್ಥೆಯ ಆರ್ಥಿಕ ಸ್ಥಿತಿಯ ಕುರಿತು.**

2022-23 ನೇ ಸಾಲಿನ ಮುಖ್ಯ ಅಭಿಯಂತರರು, ಕೆರೆಗಳ ಘಟಕ ಕಚೇರಿಯ ಆದಾಯ-ವೆಚ್ಚಗಳ ಮಾಹಿತಿಗೆ ಸಂಬಂಧಿಸಿದಂತೆ ನಗದು ಪುಸ್ತಕವನ್ನು ನಿರ್ವಹಿಸಿದ್ದು, ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 329, 330 ಮತ್ತು 331ರನ್ವಯ ಕಛೇರಿಯ ಸ್ವೀಕೃತಿ/ ವೆಚ್ಚಗಳ ವಿವರಗಳುಳ್ಳ ನಗದು ಪುಸ್ತಕವನ್ನು ನಿರ್ವಹಿಸಬೇಕಾಗಿದ್ದು, ನಿರ್ವಹಿಸಿರುವುದಿಲ್ಲ ಈ ಪ್ರಕಾರ ನಿರ್ವಹಿಸಲು ಸೂಚಿಸಲಾಗಿದೆ. ಪ್ರತಿ ತಿಂಗಳ ಅಂತ್ಯದಲ್ಲಿ ಲೆಕ್ಕ ಸಮನ್ವಯ ಮಾಡಿ ಕಚೇರಿ ಮುಖ್ಯಾಧಿಕಾರಿಗಳು ದೃಢೀಕರಿಸಬೇಕಾಗಿರುತ್ತದೆ.

**2. ಲೆಕ್ಕಸಮನ್ವಯದ ವಿವರ ಹಾಜರುಪಡಿಸದಿರುವುದು:**

ಕರ್ನಾಟಕ ಪೌರ ಸಭೆಗಳ ಲೆಕ್ಕ ಪದ್ಧತಿ ಮತ್ತು ಬಜೆಟ್ ನಿಯಮಗಳು 2006 ಕಲಂ 121ರ ಅನ್ವಯ ಪ್ರತಿ ಮಾಹೆ ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್‌ಶೀಟ್‌ನೊಂದಿಗೆ ವೆಚ್ಚಗಳನ್ನು ಪರಿಶೀಲಿಸಿ ಆಖೈರು ಶಿಲ್ಕಿನೊಂದಿಗೆ ಲೆಕ್ಕಸಮನ್ವಯ ಮಾಡಬೇಕಿರುತ್ತದೆ. ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳವುದು ಅಗತ್ಯವಾಗಿರುತ್ತದೆ. ಲೆಕ್ಕಸಮನ್ವಯ ಮಾಡಿ ವಿವರಗಳನ್ನು ಮುಂದಿನ ಸಾಲಿನ ಲೆಕ್ಕ ತನಿಖೆಗೆ ಹಾಜರುಪಡಿಸುವುದು.

**3. ಟೆಂಡರ್ ಸಲ್ಲಿಸಲು ನಿಗದಿಪಡಿಸಲಾದ ಕನಿಷ್ಠ ಕಾಲಾವಧಿಯನ್ನು ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಾಮಗಾರಿಗಳಿಗೆ ಪಾಲಿಸಬೇಕಿರುವುದು.**

ಸದರಿ ಕಚೇರಿಯಲ್ಲಿ 2022-23 ನೇ ಸಾಲಿನಲ್ಲಿ ಇ-ಸಂಗ್ರಹಣೆ ಮೂಲಕ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿರುವ. ಕಾಮಗಾರಿಗಳ ಕಡತಗಳನ್ನು ಪರಿಶೀಲಿಸಲಾಗಿ, ಟೆಂಡರ್ ಸಲ್ಲಿಸಲು ನಿಗದಿಪಡಿಸಲಾದ ಕನಿಷ್ಠ ಕಾಲಾವಧಿಗಿಂತ ಕಡಿಮೆ ಕಾಲಾವಧಿಯನ್ನು ನಿಗದಿಪಡಿಸಿರುವುದು ಕಂಡುಬಂದಿರುತ್ತದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ರ ನಿಯಮ 17 ರಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಕಾಲಾವಧಿಯನ್ನು ನಿಗದಿಪಡಿಸಲಾಗಿದೆ. ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 195 ವೆಚ್ಚ 12/11,ದಿನಾಂಕ: 30.03.2011 ರಲ್ಲಿ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿತ ಕಾಲಾವಧಿಯ ಬಗ್ಗೆ ಸ್ಪಷ್ಟವಾದ ಸೂಚನೆಗಳನ್ನು ನೀಡಲಾಗಿದೆ.

3.1 ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕನಿಷ್ಠ ಕಾಲಾವಧಿ:

(I) ಟೆಂಡರ್‌ಗಳನ್ನು ಸಲ್ಲಿಸಲು ಸಾಕಷ್ಟು ಕಾಲಾವಧಿ ಒದಗಿಸಿರುವುದನ್ನು ಮತ್ತು ಸೂಕ್ತ ಟೆಂಡರ್ ಬುಲೆಟಿನ್‌ಲ್ಲಿ ಟೆಂಡರುಗಳನ್ನು ಆಹ್ವಾನಿಸುವ ನೋಟಿಸಿನ ಪ್ರಕಟಣೆಯ ದಿನಾಂಕ ಮತ್ತು ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ನಡುವೆ ಕನಿಷ್ಠ ಕಾಲಾವಧಿ ನೀಡಿರುವುದನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಯು ಖಚಿತಪಡಿಸಿಕೊಳ್ಳತಕ್ಕದ್ದು ಹಾಗೂ ಈ ಕನಿಷ್ಠ ಕಾಲಾವಧಿಯು ಈ ಮುಂದಿನಂತಿರತಕ್ಕದ್ದು.

ಎ) ಎರಡುಕೋಟಿ ರೂ.ಗಳ ವರೆಗಿನ ಮೌಲ್ಯದ ಟೆಂಡರುಗಳಿಗೆ ಮೂವತ್ತು ದಿನಗಳು

ಬಿ) ಎರಡುಕೋಟಿ ರೂ.ಗಳಿಗಿಂತ ಹೆಚ್ಚಿನ ಮೌಲ್ಯದ ಟೆಂಡರುಗಳಿಗೆ ಅರವತ್ತು ದಿನಗಳು.

3.2 (1) ನೇ ಉಪನಿಯಮದ ಮೇರೆಗೆ ಗೊತ್ತುಪಡಿಸಲಾದ ಕಾಲಾವಧಿಯಲ್ಲಿ ಯಾವುದೇ ಕಡಿತವನ್ನು ಮಾಡಬೇಕಾದರೆ ಟೆಂಡರು ಆಹ್ವಾನಿಸುವ ಪ್ರಾಧಿಕಾರಿಗಿಂತ ಹಿರಿಯ ಪ್ರಾಧಿಕಾರಿಯು, ಲಿಖಿತವಾಗಿ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟವಾಗಿ ಅಧಿಕೃತಗೊಳಿಸಬೇಕು. ಈ ಪ್ರಕಾರ ಕ್ರಮ ವಹಿಸಲು ಸೂಚಿಸಲಾಗಿದೆ.

ಈ ಮೇಲಿನ ನಿಯಮಗಳಲ್ಲಿನ ಸೂಚನೆಗಳನ್ನು ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಗಳು ಪಾಲಿಸದೆ ಅಸಹಜ ಎನಿಸುವಷ್ಟರ ಮಟ್ಟಿಗೆ ಕನಿಷ್ಠ ಕಾಲಾವಧಿಯನ್ನು ನಿಗದಿಪಡಿಸುತ್ತಿರುವುದು ಆರ್ಥಿಕ ಇಲಾಖೆಯ ಗಮನಕ್ಕೆ ಬಂದಿದ್ದು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿಗಳು ಮೇಲೆ ತಿಳಿಸಿದ ನಿಯಮದಲ್ಲಿನ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸುವಂತೆ ಸೂಚಿಸಲಾಗಿದೆ.

ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವ ಕಡತಗಳನ್ನು ಪರಿಶೀಲಿಸಿದಾಗ ಕಾಮಗಾರಿಗಳ ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರಕ್ಕೆ ಕಡತವನ್ನು ಸಲ್ಲಿಸುವಾಗ ಪ್ರತಿ ಕಾಮಗಾರಿಗೂ ಏಳಿಕ ನಿಯಮಾನುಸಾರ ಅಲ್ಪಾವಧಿ ಟೆಂಡರನ್ನು e-Procurement ಮೂಲಕ ಆಹ್ವಾನಿಸಲು ಅನುಮೋದನೆಯನ್ನು ಕೋರಲಾಗಿರುವುದು ಕಂಡು ಬಂದಿದ್ದು, ಅತಿ ತುರ್ತಾಗಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳನ್ನು ಮೇಲಿನ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವ ನಿಬಂಧನೆಗಳಂತೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿ ನಿರ್ವಹಿಸಬೇಕಾಗಿರುತ್ತದೆ. ಆದರೆ ಸದರಿ ಕಚೇರಿಯಲ್ಲಿ ಇ-ಸಂಗ್ರಹಣೆ ಮೂಲಕ ಎಲ್ಲ ಕಾಮಗಾರಿಗಳನ್ನು ಅಲ್ಪಾವಧಿ ಟೆಂಡರ್ ಪ್ರಕ್ರಿಯೆ ಮೂಲಕ ಕೈಗೊಳ್ಳಲಾಗಿದೆ. ಅಲ್ಲದೇ ಸರ್ಕಾರವು ಸುತ್ತೋಲೆ ಸಂಖ್ಯೆ: ಆಇ 195 ವೆಚ್ಚ 12/11. ದಿನಾಂಕ: 30.03.2011 ರಲ್ಲಿ ಸೂಚಿಸಿರುವಂತೆ ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕಾಲಾವಧಿಯನ್ನು ಕಡಿತಗೊಳಿಸಿರುವ ಬಗ್ಗೆ ಟೆಂಡರು ಆಹ್ವಾನಿಸುವ ಪ್ರಾಧಿಕಾರಿಗಿಂತ ಹಿರಿಯ ಪ್ರಾಧಿಕಾರಿಯು ಲಿಖಿತವಾಗಿ ಕಾರಣಗಳನ್ನು ದಾಖಲಿಸಿ ನಿರ್ದಿಷ್ಟವಾಗಿ ಅಧಿಕೃತಗೊಳಿಸಿರುವ ದಾಖಲೆಗಳು ಕಡತಗಳಲ್ಲಿ ಕಂಡುಬಂದಿರುವುದಿಲ್ಲ. ಇದರಿಂದಾಗಿ ಮೇಲ್ಕಂಡ ಸರ್ಕಾರದ ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿದಂತಾಗಿರುವುದಲ್ಲದೆ, ಸರ್ಕಾರವು ಟೆಂಡರ್‌ಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕಾಲಾವಧಿಯನ್ನು ನೀಡದಿರುವುದರಿಂದ ಟೆಂಡರ್‌ನಲ್ಲಿ ಹೆಚ್ಚಿನ ಬಿಡ್ಡುದಾರರು ಭಾಗವಹಿಸಿ ಹೆಚ್ಚು ಸ್ಪರ್ಧಾತ್ಮಕ ದರಗಳು ಲಭ್ಯವಾಗಿ ಪಾಲಿಕೆಗೆ ಉಳಿತಾಯವಾಗುವುದು ತಪ್ಪಿದಂತಾಗಿದೆ.

ಆದ್ದರಿಂದ ಮೇಲ್ಕಂಡ ಸರ್ಕಾರದ ಆದೇಶ ಮತ್ತು ಸುತ್ತೋಲೆಯಲ್ಲಿನ ಸೂಚನೆಗಳನ್ನು ಉಲ್ಲಂಘಿಸಿ 2022–23 ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ನಿಗದಿಪಡಿಸಲಾದ ಕನಿಷ್ಠ ಕಾಲಾವಧಿಯನ್ನು ಪಾಲಿಸದೆ ಅಲ್ಪಾವಧಿ ಟೆಂಡರ್ ಆಹ್ವಾನಿಸಿರುವ ಕುರಿತು ಸೂಕ್ತ ವಿವರಣೆಯನ್ನು ಲೆಕ್ಕಪರಿಶೋಧನೆಗೆ ಒದಗಿಸಲು ಕೋರಲಾಗಿದೆ

**4. ಅಗತ್ಯಕ್ಕೆ ಅನುಗುಣವಾಗಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸದಿರುವುದು.**

ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸುವ ಮೊದಲು ಸಂಬಂಧಪಟ್ಟ ಸಹಾಯಕ ಇಂಜಿನಿಯರ್/ ಕಿರಿಯ ಇಂಜಿನಿಯರ್‌ರವರು ಪೂರ್ವಭಾವಿ ಸ್ಥಳ ಪರಿಶೀಲನೆಯನ್ನು ಆಧರಿಸಿ ವಾಸ್ತವಿಕವಾಗಿರುವಂತೆ ಅಂದಾಜನ್ನು ತಯಾರಿಸಬೇಕು. (ಪ್ಯಾರಾ 115 ಕೆ.ಪಿ.ಡಬ್ಲ್ಯೂ.ಡಿ ಕೋಡ್) ಅಂದಾಜನ್ನು ಪ್ರಸಕ್ತ ಸಾಲಿನ ಲೋಕೋಪಯೋಗಿ ಬೆಂಗಳೂರು ವೃತ್ತದದರ ಪಟ್ಟಿಯ ಆಧಾರದ ಮೇಲೆ ತಯಾರಿಸಬೇಕು. ಹಳೆಯ ದರ ಪಟ್ಟಿಯ ಆಧಾರದಿಂದ ತಯಾರಿಸಿದ ಅಂದಾಜುಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಮೊದಲು ಪ್ರಸಕ್ತ ಸಾಲಿನ ದರ ಪಟ್ಟಿಗೆ ಮರು ಮೌಲ್ಯ (recasting of estimates to CSR) ಕಡ್ಡಾಯವಾಗಿ ಮಾಡತಕ್ಕದು ಹಾಗೂ ಮೂಲ ವಿನ್ಯಾಸವನ್ನು ಸಹ ಅಗತ್ಯವಿದ್ದಲ್ಲಿ ಅಗತ್ಯತೆಗೆ ಅನುಗುಣವಾಗಿ ಮಾರ್ಪಾಡಿಸತಕ್ಕದ್ದು, ಅಂದಾಜು ಪಟ್ಟಿ ತಯಾರಿಕೆಗೆ ಮೊದಲು ಅಗತ್ಯವಾದ ಪೂರ್ವಭಾವಿ ಪರೀಕ್ಷೆಗಳನ್ನು ಹಾಗೂ ಸಮೀಕ್ಷೆಗಳನ್ನು ನಡೆಸಿ ಅಂತಹ ವರದಿಯ ಫಲಿತಾಂಶಗಳನ್ನು ಅಂದಾಜು ಪಟ್ಟಿಯಲ್ಲಿ ಅಳವಡಿಸತಕ್ಕದು ಅಂದಾಜಿನಲ್ಲಿ ಅಂದಾಜು ವೆಚ್ಚವನ್ನುಯಾವ ಮೂಲದಿಂದ ಭರಿಸಲಾಗುತ್ತದೆ. ಹಾಗೂ ಕಾಮಗಾರಿಯನ್ನು ತೆಗೆದುಕೊಳ್ಳಲು ಪ್ರಸಕ್ತ ವರ್ಷದ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವ ಬಗ್ಗೆ ಸ್ಪಷ್ಟ ನಿಲುವುಗಳನ್ನು ನಮೂದಿಸಬೇಕು. (ಪ್ಯಾರಾ 119 ಕೆ.ಪಿ.ಡಬ್ಲ್ಯೂ.ಡಿ ಕೋಡ್) ಅಂದಾಜು ತಯಾರಿಕೆಯಲ್ಲಿ ಪ್ರಸಕ್ತ ಸಾಲಿನ ದರಗಳ ಜೊತೆಗೆ ಕಾಮಗಾರಿ ನಿರ್ವಹಿಸಬೇಕಾದ ಸಾಮಾಗ್ರಿಗಳ ಹೆಚ್ಚುವರಿ ಸಾಗಾಣೆ ದರಕ್ಕೆ (Lead charges) ಮತ್ತು ಏರಿಸುವ ಇಳಿಸುವ (lift charge) loading & unloading area weightage silt removal ಪ್ರಕರಣದಲ್ಲಿ ದರಗಳನ್ನು ಅಧಿಕವಾಗಿ ಅವಶ್ಯಕತೆವಿದ್ದಲ್ಲಿ ಹಾಗೂ ಅವಕಾಶ ಇದ್ದಲ್ಲಿ ಸೇರಿಸಿ ಅಂದಾಜನ್ನು ವಾಸ್ತವಿಕತೆ ಆಧಾರದ ಮೇಲೆ ತಯಾರಿಸಬೇಕು (ಪ್ಯಾರಾ 118 ಕೆ.ಪಿ.ಡಬ್ಲ್ಯೂ.ಡಿ ಕೋಡ್)

**5. ನಿಯಮಾನುಸಾರ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸದೆ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿರುವ ಬಗ್ಗೆ.**

ಸದರಿ ವಿಭಾಗದ ಕಾಮಗಾರಿಯ ಕಡತಗಳನ್ನು ಪರಿಶೀಲಿಸಲಾಗಿ ತಾಂತ್ರಿಕ ಮಂಜೂರಾತಿಯನ್ನು ಮಂಜೂರು ಮಾಡುವ ಪ್ರಾಧಿಕಾರವು ಈ ಕೆಳಕಂಡ ವಿವರಗಳನ್ನು ಪರಿಶೀಲಿಸಿ ಮಂಜೂರಾತಿಯನ್ನು ನೀಡಬೇಕಾಗಿರುತ್ತದೆ. ಪ್ಯಾರಾ 135 ಕೆ.ಪಿ.ಡಬ್ಲ್ಯೂಡಿ ಕೋಡ್ ಪ್ರಕಾರ ವಿನ್ಯಾಸಗಳಿಗೆ ಸಂಬಂಧಪಟ್ಟಂತೆ ಎಲ್ಲಾ ಪರಿಶೀಲನೆಗಳನ್ನು ನಿರ್ವಹಿಸ ತಕ್ಕದ್ದು, ಅಂದಾಜು ತಯಾರಿಕೆಯಲ್ಲಿ ಅಳವಡಿಸಬೇಕಾದ ಎಲ್ಲಾ ಕ್ರಮಗಳನ್ನು ಅಳವಡಿಸಲಾಗಿದೆಯೇ ಹಾಗೂ ಲೋಕೋಪಯೋಗಿ ಸಂಹಿತೆಯ ನಿಯಮಗಳನ್ನು ಪಾಲಿಸಲಾಗಿದೆಯೇ ಎಂಬುವುದರ ಬಗ್ಗೆ ಖಚಿತ ಪಡಿಸಿಕೊಳ್ಳುವುದು, ಆಡಳಿತಾತ್ಮಕ ಮಂಜೂರಾತಿ ಇಲ್ಲದೆ ತಾಂತ್ರಿಕ ಮಂಜೂರಾತಿಯನ್ನು ಯಾವುದೇ ಕಾರಣಕ್ಕೂ ನೀಡುವಂತಿಲ್ಲ. ಆದರೆ ಹಲವಾರು ಕಾಮಗಾರಿಗಳಲ್ಲಿ ಮೇಲ್ಕಂಡ ಕ್ರಮಗಳನ್ನು ಪಾಲಿಸದೆಯಿರುವುದು ಕಂಡುಬಂದಿದೆ. ಇದರಿಂದ ಮಾರ್ಪಡಿತ ಅಂದಾಜು ಪಟ್ಟಿಗಳಿಗೆ ಅವಕಾಶ ಮಾಡಿಕೊಟ್ಟು, ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ.

**6. ಸಿಬ್ಬಂದಿ ವೇತನ ಬಟಾವಡೆ ವಿವರಗಳ ಪರಿಶೀಲನೆಯ ಬಗ್ಗೆ.**

ಸದರಿ ಕಛೇರಿಯ ಅಧಿಕಾರಿ/ಸಿಬ್ಬಂದಿಗಳ ವೇತನವನ್ನು ಪ್ರಾಜೆಕ್ಟ್ ನಲ್ಲಿ ಡ್ರಾ ಮಾಡಲಾಗುತ್ತಿದೆ. ಆದುದರಿಂದ ಸದರಿ ವಿವರಗಳನ್ನು ಪರಿಶೀಲಿಸಿರುವುದಿಲ್ಲ.

**7. ಶ್ರೇಣಿ ವಹಿ ನಿರ್ವಹಿಸುವ ಬಗ್ಗೆ.**

ಮುಖ್ಯ ಅಭಿಯಂತರರು, ಕೆರೆಗಳ ಘಟಕ ಈ ಕಚೇರಿಯ 2022-23 ನೇ ಸಾಲಿನ ಲೆಕ್ಕಪರಿಶೋಧನಾ ಅವಧಿಯಲ್ಲಿ ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವಿವರಗಳನ್ನು ಪರಿಶೀಲಿಸಲು ಶ್ರೇಣಿ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದಾಗಿ ಈ ಕಛೇರಿಗೆ ಮಂಜೂರಾದ ಹುದ್ದೆಗಳೆಷ್ಟು? ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳೆಷ್ಟು? ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಲೆಕ್ಕಪರಿಶೋಧನೆಗೆ ದೊರೆತಿರುವುದಿಲ್ಲ. ನಿರ್ವಹಿಸದಿದ್ದಲ್ಲಿ ಶ್ರೇಣಿ ವಹಿಯನ್ನು ನಿರ್ವಹಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

**8. ಕಾಮಗಾರಿ ವಹಿಯನ್ನು ನಿರ್ವಹಿಸದಿರುವುದು.**

ಪ್ರತಿಯೊಂದು ವಿಭಾಗದಲ್ಲಿ ನಿರ್ವಹಿಸಲಾಗುವ ಸಿವಿಲ್ ಕಾಮಗಾರಿಗಳಿಗೆ ಸಂಬಂಧಿಸಿದಂತೆ PWD A CODE FORM NO.12 ರಲ್ಲಿ(ನಿಯಮ 284) ರಂತೆ ಕಾಮಗಾರಿ ವಹಿಯನ್ನು ನಿರ್ವಹಿಸಬೇಕಿರುತ್ತದೆ ಮತ್ತು ಸದರಿ ನಮೂನೆಯಲ್ಲಿ ನಿರ್ವಹಿಸುವ ವಹಿಯಲ್ಲಿ ಹಿಂದಿನ ವರ್ಷದಲ್ಲಿ ಕಾಮಗಾರಿಗೆ ಮಾಡಲಾಗಿರುವ ವೆಚ್ಚದ ವಿವರ, ಕಾಮಗಾರಿಗೆ ಪಾವತಿ ಮಾಡಲಾಗಿರುವ ಮುಂಗಡಗಳ ವಿವರ, ಕಾಮಗಾರಿಗೆ ಬಳಸಲಾಗಿರುವ ಐಟಂಗಳ ಪರಿಮಾಣ ಮತ್ತು ಮೊತ್ತದ ವಿವರಗಳನ್ನು ದಾಖಲಿಸಬೇಕಿರುತ್ತದೆ.

ಮೇಲಿನ ನಿಯಮದಂತೆ ಸದರಿ ವಿಭಾಗದಲ್ಲಿ ನಿರ್ವಹಿಸುವ ಕಾಮಗಾರಿಗಳಿಗೆ ಸಂಬಂಧಿಸಿದ ಕಾಮಗಾರಿ ವಹಿಯನ್ನು ನಿರ್ವಹಿಸಿರುವುದಿಲ್ಲ. ಇದರಿಂದಾಗಿ ಕಾಮಗಾರಿಯ ಪ್ರಗತಿ ಮತ್ತು ವೆಚ್ಚದ ವಿವರ ಮತ್ತು ಮುಂದುವರೆದ ಕಾಮಗಾರಿಗಳ ಬಗ್ಗೆ ನಿಖರವಾಗಿ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಆದ್ದರಿಂದ ಕೂಡಲೇ ಮೇಲಿನ ನಿಯಮದಂತೆ ಕಾಮಗಾರಿ ವಹಿಯನ್ನು ನಿರ್ವಹಿಸಿ ವಿವರಗಳನ್ನು ದಾಖಲಿಸಿ ದೃಢೀಕರಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

**9. ಭದ್ರತಾ ಠೇವಣಿ/ಹೆಚ್ಚುವರಿ ಭದ್ರತಾ ಠೇವಣಿ ಕುರಿತು.**

2022-23 ನೇ ಸಾಲಿನ ಗುತ್ತಿಗೆದಾರರಿಗೆ ಭದ್ರತಾ ಠೇವಣಿ/ ಹೆಚ್ಚುವರಿ ಭದ್ರತಾ ಠೇವಣಿ ಮರುಪಾವತಿ ಹಾಗೂ ಕಡಿತಗೊಳಿಸಿದ ಠೇವಣಿ ಮೊತ್ತಕ್ಕೆ ವಹಿಯನ್ನು ನಿರ್ವಹಿಸಿರುವುದಿಲ್ಲ. ಇದರಿಂದ ಭದ್ರತಾ ಠೇವಣಿ ಕಡಿತಗೊಳಿಸಿದ ವಿವರ, ಗುತ್ತಿಗೆದಾರರಿಗೆ ಹಿಂದಿರುಗಿಸಬೇಕಾದ ಹೊಣೆಗಾರಿಕೆಯ ಮೊತ್ತ ಹಾಗೂ ಠೇವಣಿಗಳ ಅವಧಿ ಮೀರಿರುವ ಬಗ್ಗೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಆದುದರಿಂದ 01-4-2022 ರಿಂದ 31-03-2023 ವರೆಗೆ ಕಡಿತಗೊಳಿಸಿದ/ಮರು ಪಾವತಿಸಿದ/

ಮರುಪಾವತಿಸಬೇಕಾದ ವಿವರಗಳನ್ನು ನಿಗಧಿತ ವಹಿಯಲ್ಲಿ ದಾಖಲಿಸಿ ಮುಂದಿನ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

**10. ಎಕ್ಸ್‌ಟೆಂಕ್ಷನ್ ಆಫ್ ಟೈಮ್ ಕಾಮಗಾರಿ ನಿರ್ವಹಣೆ ಹಂತದಲ್ಲಿಯೇ ಪಡೆಯದೇ ಇರುವುದು.**

2022-23 ನೇ ಸಾಲಿನ ಸದರಿ ಕಛೇರಿಯ ಕಾಮಗಾರಿ ಕಡತಗಳನ್ನು ಪರಿಶೀಲನೆ ಸಂದರ್ಭದಲ್ಲಿ ಎಕ್ಸ್‌ಟೆಂಕ್ಷನ್ ಆಫ್ ಟೈಮ್ ಕಾಮಗಾರಿ ನಿರ್ವಹಣೆ ಹಂತದಲ್ಲಿಯೇ ಪಡೆಯಬೇಕಿರುತ್ತದೆ. ಬಹುತೇಕ ಬಿಲ್ಲುಗಳಲ್ಲಿ ಕಾಮಗಾರಿ ಮುಕ್ತಾಯಗೊಂಡ ನಂತರ ಬಿಲ್ಲು ಪಾವತಿ ಹಂತದಲ್ಲಿ ಅನುಮೋದನೆ ಪಡೆಯಲಾಗುತ್ತದೆ. ಆದ್ದರಿಂದ ಕಾಮಗಾರಿ ನಿರ್ವಹಣೆ ಹಂತದಲ್ಲಿಯೇ ಎಕ್ಟೆಂಕ್ಷನ್ ಆಫ್ ಟೈಮ್ ಅನುಮೋದನೆ ಪಡೆಯುವುದು ಸೂಕ್ತವೆಂದು ಲೆಕ್ಕ ತನಿಖೆಯು ಅಭಿಪ್ರಾಯ ವ್ಯಕ್ತಪಡಿಸಿದೆ

**11. ಕಾಮಗಾರಿ ಕಡತದಲ್ಲಿ ಕಂಡು ಬಂದ ನ್ಯೂನತೆಗಳು.**

2022-23 ನೇ ಸಾಲಿನ ಸದರಿ ಕಛೇರಿಯ ಕಾಮಗಾರಿ ಕಡತಗಳನ್ನು ಪರಿಶೀಲನೆ ಸಂದರ್ಭದಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿದ್ದು, ಅವುಗಳು ಕೆಳಕಂಡಂತಿವೆ.

1. ಹಲವು ಕಡತಗಳಲ್ಲಿ ಕಾಮಗಾರಿಯ ಛಾಯಾಚಿತ್ರಗಳನ್ನು ಹಾಕಿರುವುದಿಲ್ಲ. ಕೆಲವು ಕಡತಗಳಲ್ಲಿ ಹಾಕಿದ್ದರೂ ಸಹ ಸಕ್ಷಮ ಅಧಿಕಾರಿಯು ದೃಢೀಕರಿಸಿರುವುದಿಲ್ಲ ಹಾಗೂ Geo-tag ಛಾಯಾಚಿತ್ರಗಳನ್ನು ಹಾಕಿರುವುದಿಲ್ಲ.
2. ಕೆರೆಗಳ ಚರಿತ್ರೆ ವಹಿಯ ಪ್ರತಿಯನ್ನು ಪ್ರತಿಯೊಂದು ಕಾಮಗಾರಿ ಕಡತದಲ್ಲಿ ಹಾಕಲು ಕ್ರಮವಹಿಸುವುದು.
3. ಕಾಮಗಾರಿಯನ್ನು ತೆಗೆದುಕೊಳ್ಳಬೇಕಾದ ಸ್ಥಳದ ಪರಿಶೀಲನೆ ಹಾಗೂ ಮಿತವ್ಯಯ ರೀತಿಯಲ್ಲಿ ತಯಾರಿಸಿದೆ ಎಂಬುದಕ್ಕೆ ಮುಖ್ಯ ಅಭಿಯಂತರರು ಯಾವುದೇ ಅಂದಾಜಿನಲ್ಲಿ ಕರ್ನಾಟಕ ಲೋಕೋಪಯೋಗಿ ಇಲಾಖಾ ಸಂಹಿತೆ ಕಂಡಿಕೆ 133ರಲ್ಲಿ ನಿರ್ದಿಷ್ಟಪಡಿಸಿರುವ ಧೃಡೀಕರಣ ದಾಖಲಿಸಿರುವುದಿಲ್ಲ.
4. ಲೀಡ್ ವೆಚ್ಚಕ್ಕಾಗಿ ಅತೀ ಸಮೀಪದ ಹಾಟ್ ಮಿಕ್ಸ್ ಪ್ಲಾಂಟ್ ಮತ್ತು ರೆಡಿ ಮಿಕ್ಸ್ ಪ್ಲಾಂಟ್‌ಗಳಿಂದ ಕಾಮಗಾರಿ ಸ್ಥಳಕ್ಕೆ ಸಾಗಿಸಿದ ಬಾಬ್ತು ಮತ್ತು ಕಾಮಗಾರಿ ನಿರ್ವಹಣೆಯಲ್ಲಿ ಉತ್ಪತ್ತಿಯಾದ ಅನುಪಯುಕ್ತ ಮಣ್ಣು ಕಲ್ಲು ಹಾಗೂ ಇತರೆ ಅನಾವಶ್ಯಕ ಸಾಮಗ್ರಿಗಳನ್ನು 15 ಕಿ.ಮೀ. ದೂರದವರೆಗೆ ಸಾಗಿಸಿದ ಬಾಬ್ತು ಲೀಡ್ ಚಾರ್ಜಗಳನ್ನು ಅಂದಾಜುಗಳಲ್ಲಿ ಸೇರಿಸಲಾಗಿದೆ. ಆದರೆ ಯಾವುದೇ ಪ್ರಕರಣಗಳಲ್ಲಿ ಲೀಡ್ ಚಾರ್ಟ ತಯಾರಿಸಿ ಅಂದಾಜುಗಳಿಗೆ ಲಗತ್ತಿಸಿರುವುದಿಲ್ಲ.
5. 2022-23 ರ ಸಾಲಿನ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದಂತೆ ಪರಿಷ್ಕೃತ ಅಂದಾಜು ಪಟ್ಟಿಗಳನ್ನು ತಯಾರಿಸಿರುವ ಕಾಮಗಾರಿಗಳ ಸಂಬಂಧ ಸಪ್ಲಿಮೆಂಟರಿ ಅಗ್ರಿಮೆಂಟ್ ಮಾಡಿಕೊಂಡು ಪರಿಷ್ಕೃತ ಕಾರ್ಯಾದೇಶಗಳನ್ನು ನೀಡಿರುವುದಿಲ್ಲ. ಈ ಸಂಬಂಧ ಕ್ರಮವಾಗಿಸಲು ಲೆಕ್ಕ ಪರಿಶೋಧನೆಯು ಸೂಚಿಸುತ್ತದೆ.
6. ಕೆಲವು ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ಆಡಳಿತಾತ್ಮಕ ಮಂಜೂರಾತಿಗೆ ಮೊದಲೇ ಕಾರ್ಯದೇಶ ನೀಡಿ ನಿರ್ವಹಿಸಲಾಗಿದೆ. ಸದರಿ ಅಂದಾಜುಗಳ ಮೊತ್ತ ಸುಮಾರು ಒಂದು ಕೋಟಿಗಳ ಮೊತ್ತವಾಗಿದ್ದು ಆಡಳಿತಾತ್ಮಕ ಅನುಮೋದನೆಯ ಮೆಮೊ ಪತ್ರದಲ್ಲಿ ಕಾರ್ಯಪಾಲಕ ಅಬಿಯಂತರರು ದೃಢೀಕರಿಸಿರುತ್ತಾರೆ.
7. ಕೆಲವು ಕಡತಗಳಲ್ಲಿ ರಾಜಧನವನ್ನು ಲೆಕ್ಕಾಚಾರ ಮಾಡಿದ ವಿವರಗಳು ಅಳತೆ ಪುಸ್ತಕದಲ್ಲಾಗಲಿ ಕಡತದಲ್ಲಾಗಲಿ ಲಭ್ಯವಿರುವುದಿಲ್ಲ ಈ ಬಗ್ಗೆ ಸಂಬಂಧಪಟ್ಟ ಅಭಿಯಂತರರು ಸೂಕ್ತ ಕ್ರಮವಹಿಸಲು ಸೂಚಿಸಿದೆ.
8. ಪ್ಯಾಕೇಜ್ ಮೂಲಕ ನಿರ್ವಹಿಸಲಾದ ಕಾಮಗಾರಿಗಳಲ್ಲಿನ ನ್ಯೂನ್ಯತೆಗಳು:
9. ಕಾಮಗಾರಿಗಳಲ್ಲಿ ಟೆಂಡರ್ ಅನುಮೋದನೆ ಸಮಿತಿ ಅನುಮೋದನಾ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಪಾವತಿಸಲಾಗಿದೆ. ಟೆಂಡರ್‌ಗಿಟ್ಟ ಮೊತ್ತಕ್ಕಿಂತ ಕಡಿಮೆ ನಮೂದಿಸಿರುವ ಮೊತ್ತವನ್ನು ಟೆಂಡರ್ ಅನುಮೋದನೆ ನಂತರ ಕಾಮಗಾರಿ ನಿರ್ವಹಣೆ ವೇಳೆಯಲ್ಲಿ ಬೇರೆ ಬೇರೆ ಕಾರಣ ನಮೂದಿಸಿ ಉಳಿತಾಯದ ಮೊತ್ತವೆಂದು ಪರಿಗಣಿಸಿ ಇಬಿಆರ್‌ಎಲ್ ಮತ್ತು ಮಾರ್ಪಾಡು ಅಂದಾಜು ಎಂದು ನಮೂದಿಸಿ ಪಾವತಿಸಲಾಗಿದೆ. ಮಾರ್ಪಾಡು ಅಂದಾಜುಗಳಲ್ಲಿ ಮೂಲ ಅಂದಾಜುಗಳಿಗೆ ಯಾರಿಗೆ ಪ್ರತ್ಯಾಯೋಜಿತ ಅಧಿಕಾರ ನೀಡಲಾಗಿದೆಯೋ ಅವರೆ ಅನುಮೋದನೆ ನೀಡಬೇಕಾಗಿದ್ದರೂ ಸಹ ಮುಖ್ಯ ಅಬಿಯಂತರರು ಅನುಮೋದಿಸಿರುತ್ತಾರೆ. ಈ ಬಗ್ಗೆ ಸೂಕ್ತ ವಿವರಗಳನ್ನು ಒದಗಿಸಲು ಸೂಚಿಸಿದೆ.

10. ಪ್ರತಿಯೊಂದು ಕಾಮಗಾರಿಗೆ ಸಂಬಂಧಸಿದಂತೆ ಕಾಮಗಾರಿ ಪ್ರಾರಂಭಿಸಿದ ದಿನಾಂಕ / ಮುಕ್ತಾಯದ ದಿನಾಂಕ ಇವುಗಳ ನಮೂದುಗಳು ಅಳತೆ ಪುಸ್ತಕದಲ್ಲಿ ನಮೂದಿಸಬೇಕಿದೆ.
11. ಸಾಕಷ್ಟು ಕಾಮಗಾರಿಗಳ ಅಳತೆ ಪುಸ್ತಕಗಳನ್ನು ಪರಿಶೀಲಿಸಿದಾಗ, ದಾಖಲಿಸಿದ ಮೆಜರ್‌ಮೆಂಟ್ ಅಳತೆಗಳಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರು ಅಳತೆಗಳನ್ನು ಪೂರ್ಣವಾಗಿ ದೃಢೀಕರಿಸಿರುವುದಿಲ್ಲ ಹಾಗೂ ಕಾರ್ಯಪಾಲಕ ಅಭಿಯಂತರರು ಸಹ ಮೆಜರ್‌ಮೆಂಟ್‌ಗೆ ದಿನಾಂಕದೊಂದಿಗೆ ಸಹಿಯನ್ನು ದೃಢೀಕರಿಸುವುದು ಅಗತ್ಯವಾಗಿರುತ್ತದೆ.
12. ಬಹಳಷ್ಟು ಕಾಮಗಾರಿ ಕಡತಗಳಲ್ಲಿ ಕಾಮಗಾರಿ ಮುಕ್ತಾಯ ವರದಿಯಲ್ಲಿನ ಹಲವಾರು ಅಂಶಗಳನ್ನು ಭರ್ತಿಮಾಡಿರುವುದಿಲ್ಲ.
13. ರಿಜಿಸ್ಟರ್ ಅಫ್ ಎಸ್ಟಿಮೇಟ್ ನಿರ್ವಹಿಸಿರುವುದಿಲ್ಲ. ಈ ವಹಿಯನ್ನು ನಿರ್ವಹಿಸಿ ಕಾಮಗಾರಿ ಮಂಜೂರಾದ ದಿನಾಂಕ, ಮಾನ್ಯ ಆಯುಕ್ತರವರು ಅನುಮೋದಿಸಿ ಆದೇಶಿಸಿರುವ ಕ್ರಮಾಂಕ, ಅಂದಾಜು ಮೊತ್ತ ಇವುಗಳ ವಿವರಗಳನ್ನು ದಾಖಲಿಸುವುದು.
14. ಪ್ರತಿ ಅಂದಾಜು ಪಟ್ಟಿಯೊಂದಿಗೆ ದರ ವಿಶ್ಲೇಷಣೆ ತಃಖ್ತೆ ಲಗತ್ತಿಸಿರುವುದು ಕಂಡು ಬಂದಿಲ್ಲ. ಇದರಿಂದಾಗಿ ಅಂದಾಜು ಪಟ್ಟಿಯಲ್ಲಿ ಪ್ರತಿ ಐಟಂಗೆ ನಿಗಧಿ ಮಾಡಿರುವ ದರದ ನಿಖರತೆಯನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಪ್ರತಿ ಅಂದಾಜು ಪಟ್ಟಿಯೊಂದಿಗೆ ದರ ವಿಶ್ಲೇಷಣೆ ತಖ್ತೆ ಲಗತ್ತಿಸಲು ತಿಳಿಸಲಾಗಿದೆ.
15. ಕೆ.ಪಿ.ಡಬ್ಲ್ಯೂ.ಡಿ ಕೋಡ್ ಪ್ಯಾರ 133 ರ ಪ್ರಕಾರ ಕಾಮಗಾರಿಯನ್ನು ಕೈಗೊಳ್ಳಬೇಕಾದ ಅವಶ್ಯಕತೆ ಬಗ್ಗೆ ಸವಿಸ್ತಾರವಾದ ತಾಂತ್ರಿಕ ವಿಶ್ಲೇಷಣಾ ವರದಿ ಲಗತ್ತಿಸಿರುವುದಿಲ್ಲ. ಇದರಿಂದಾಗಿ ಕಾಮಗಾರಿಯನ್ನು ಕೈಗೊಳ್ಳುವ ಅಗತ್ಯ ಇತ್ತೆ? ಎಂಬುದು ತಿಳಿಯುವುದಿಲ್ಲ. ಆದ್ದರಿಂದ ಪ್ರತಿ ಕಾಮಗಾರಿ ಕೈಗೊಳ್ಳುವ ಮುನ್ನ ತಾಂತ್ರಿಕ ವಿಶ್ಲೇಷಣಾ ವರದಿ ತಯಾರಿಸಿ ಅಂದಾಜು ಪಟ್ಟಿಯೊಂದಿಗೆ ಕಡತದಲ್ಲಿರಿಸುವುದು ಅಗತ್ಯವಾಗಿರುತ್ತದೆ.
16. ಕೆ.ಪಿ.ಡಬ್ಲ್ಯೂ.ಡಿ 'ಎ' ಕೋಡ್ ಪ್ಯಾರ 209 ರಂತೆ ಅಳತೆ ಪುಸ್ತಕದಲ್ಲಿ ಉಪಯೋಗಿಸದೆ ಉಳಿಯುವ ಖಾಲಿ ಪುಟಗಳನ್ನು ರದ್ದು ಪಡಿಸಬೇಕು. ಹಾಗೂ ಪ್ಯಾರಾ 221 ರಂತೆ ಉಪಯೋಗಿಸಿದ ಪುಟಗಳನ್ನು ಕೆಂಪು ಶಾಯಿಯಲ್ಲಿ ಕ್ರಾಸ್ ಮಾಡಬೇಕಿರುತ್ತದೆ. ಈ ಬಗ್ಗೆ ಕ್ರಮ ವಹಿಸುವುದು.
17. ಆಯುಕ್ತರ ಆದೇಶ ಸಂಖ್ಯೆ:ವಿ.ಆ(ಯೋ)/ಪಿಆರ್/6444/2018-19 ದಿನಾಂಕ:18.01.2019ರಂತೆ ಎಲ್ಲಾ ಕಾಮಗಾರಿಗಳ ಅಳತೆಯನ್ನು ನಮೂದಿಸಿರುವ ಅಳತೆ ಪುಸ್ತಕದಲ್ಲಿ ಸಂಬಂಧಪಟ್ಟ ಮುಖ್ಯ ಅಭಿಯಂತರರು ಪರಿಶೀಲಿಸಿ ದೃಢೀಕರಿಸಬೇಕಾಗಿರುತ್ತದೆ.

**ಸಾಮಾನ್ಯ ಅಭಿಪ್ರಾಯ:**

1. ಬ್ಯಾಂಕ್ ಗ್ಯಾರಂಟಿ (ಬಿ.ಜಿ) ವಹಿಯನ್ನು ನಿರ್ವಹಿಸಿರುವುದಿಲ್ಲ. ಈ ವಹಿಯನ್ನು ನಿರ್ವಹಿಸಿ ವಿವರಗಳನ್ನು ದಾಖಲಿಸಿ, ನಿರ್ವಹಣೆ ಕಾಲಾವಧಿ ಮುಗಿಯುವರೆಗೆ ಬ್ಯಾಂಕ್ ಗ್ಯಾರಂಟಿಗಳ ಚಾಲ್ತಿಯಲ್ಲಿರುವಂತೆ ಕಾಲಕಾಲಕ್ಕೆ ನಿಗದಿತ ಅವಧಿ ಒಳಗೆ ನವೀಕರಿಸಲು ಕ್ರಮ ವಹಿಸುವುದು.
2. ಕೆರೆಗಳ ವಾರ್ಷಿಕ ನಿರ್ವಹಣೆಯ ವಹಿಯನ್ನು ನಿರ್ವಹಿಸಿರುವುದಿಲ್ಲ.
3. ಡಿಸಿ ಬಿಲ್ ವಹಿಯನ್ನು ನಿಯಮಾನುಸಾರ ನಿರ್ವಹಿಸಿ ಅನುಮೋದನೆಗೊಂಡ ಮೊತ್ತಗಳನ್ನು ಮತ್ತು ರದ್ದುಪಡಿಸಲಾದ ಡಿಸಿಬಿಲ್‌ಗಳನ್ನು ಸಹ ವಹಿಯಲ್ಲಿ ಬರೆದು ಮೇಲಾಧಿಕಾರಿಗಳಿಂದ ಧೃಡೀಕರಿಸಬೇಕಿರುತ್ತದೆ. ಆದರೆ ನಿರ್ವಹಿಸಿರುವುದಿಲ್ಲ.
4. ಕಛೇರಿಯಲ್ಲಿರುವ ಪೀಠೋಪಕರಣಗಳಿಗೆ ಸಂಬಂದಿಸಿದಂತೆ ದಾಸ್ತಾನು ವಹಿಯನ್ನು ನಿರ್ವಹಿಸಿ ವಿವರ ದಾಖಲಿಸುವುದು.
5. ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಹೆಚ್ಚಿನ ಸುಧಾರಣೆ ಅಗತ್ಯವಾಗಿರುತ್ತದೆ. ಉಳಿದಂತೆ ವರದಿಯಲ್ಲಿ ಸೂಚಿಸಲಾದ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಸೂಚಿಸಲಾಗಿದೆ.

ವಿಭಾಗದ ಕಛೇರಿಯಲ್ಲಿ ಕಾಮಗಾರಿಯ ಪಾವತಿಗೆ ಸಂಬಂಧಿಸಿದ ಕಡತಗಳಲ್ಲಿ ಕೆಳಕಂಡ ದಾಖಲೆಗಳು ಲಭ್ಯವಿರಬೇಕಿರುತ್ತದೆ.

1. ಕಾಮಗಾರಿಯ ಅವಶ್ಯಕತೆ ಬಗ್ಗೆ ವರದಿ.
2. ಅಂದಾಜನ್ನು ಮಿತವ್ಯಯ ಕಾರಿಯಾಗಿ ತಯಾರಿಸುವ ಬಗ್ಗೆ ವರದಿ
3. ಕಾಮಗಾರಿಯ ಉಪಯೋಗ
4. ಕಾಮಗಾರಿಯ ಪರಿಮಿತಿ
5. ಅಳವಡಿಸಿಕೊಳ್ಳಲಾದ ವಿಶಿಷ್ಟ ವಿವರಣೆ ಮತ್ತು ವಿನ್ಯಾಸಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ
6. ಯೋಜನೆ / ಕಾಮಗಾರಿ ವೆಚ್ಚ
7. ಹಣಕಾಸಿನ ಲಭ್ಯತೆ ಆಯವ್ಯಯದ ಅವಕಾಶ ಹಾಗೂ ವೆಚ್ಚದ ಲೆಕ್ಕ ಶೀರ್ಷಿಕೆ
8. ದರ ಪಟ್ಟಿಯಲ್ಲಿ ದರಗಳು ಇಲ್ಲದೆ ಬಾಬ್ತುಗಳಿಗೆ ಅಳವಡಿಸಿಕೊಳ್ಳಲಾದ ದರಗಳ ಲೆಕ್ಕಾಚಾರ ಪಟ್ಟಿ ಅವುಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆಗೊಂಡಿರುವ ಬಗ್ಗೆ ವಿವರ.

ಮುಖ್ಯ ಲೆಕ್ಕಪರಿಶೋಧಕರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು.